GOVERNMENT OF INDIA
DEPARTMENT OF ARCHAEOLOGY
CENTRAL ARCHAEOLOGICAL LIBRARY

CLASS
CALL No. R 913.03 I.D.A.-S.K.
No 13

D.G.A. 79.

D 175

MEMOIRS OF THE ARCHÆOLOGICAL SURVEY
OF INDIA

No. 13

# KANNADA POETS MENTIONED IN INSCRIPTIONS

BY
T. T. SHARMAN

UNDER THE EDITORSHIP
OF
RAO BAHADUR H. KRISHNA SHASTRI
*Government Epigraphist*

21899

D175

R 913.03
I.D.A./S.K.

MADRAS
PRINTED BY THE SUPERINTENDENT, GOVERNMENT PRESS

1924

DIRECTOR GENERAL OF ARCHAEOLOGY
D175
Library Regd. No. 36/25
INDIA

CENTRAL ARCHAEOLOGICAL
LIBRARY, NEW DELHI.
Acc. No. 21899.
Date. 8. 12. 55.
Call No. R913.03/I.D.A/Sha S.K

ಶ್ರೀ

# ಶಿಲಾಶಾಸನಗಳಲ್ಲಿ ಕಂಡ ಕರ್ಣಾಟಕ ಕವಿಗಳು

ತಿರುಮಲ ತಾತಾಚಾರ್ಯ ಶರ್ಮರವರಿಂದ ರಚಿಸಲ್ಪಟ್ಟು

ಗವರ್ನ್‌ಮೆಂಟು ಎಪಿಗ್ರಾಫಿಸ್ಟ್ ರಾವ್ ಬಹದೂರ್ ಹೊ. ಕೃಷ್ಣಶಾಸ್ತ್ರಿಗಳವರಿಂದ ಪರಿಶೋಧಿತವಾಗಿದೆ

ಮದ್ರಾಸು

ಗವರ್ನ್‌ಮೆಂಟ್ ಪ್ರೆಸ್ ಸೂಪರಿಂಟೆಂಡೆಂಟರವರಿಂದ ಮುದ್ರಿಸಲ್ಪಟ್ಟಿದೆ

1924

1-A

## ವಿಷಯ ಸೂಚಿಕೆ.


| | ಕ್ರಿ.ಶ. (ಸುಮಾರು) ಕಾಲ. | ಪುಟ. |
|---|---|---|
| ದಿವಾಕರ ... ... ... ... ... ... | ೭೩೪ | 1 |
| ಗುಣವರ್ಮ ... ... ... ... ... ... | ೯೧೫ | 3 |
| ಕವಿಕಮಲಾದಿತ್ಯ ... ... ... ... ... ... | ೯೮೦ | 4 |
| ನಾಗವರ್ಮ ... ... ... ... ... ... | ೧೦೪೭ | 5 |
| ಇಂದ್ರಕೀರ್ತಿ ... ... ... ... ... ... | ೧೦೫೫ | 6 |
| ರಾಮಭಯ್ಯ ... ... ... ... ... ... | ೧೦೫೯ | 6 |
| ನಾರಾಯಣ ಭಟ್ಟ ... ... ... ... ... ... | ೧೦೫೩ | 8 |
| ಶ್ರೀಕಂಠಸೂರಿ ... ... ... ... ... ... | ೧೦೯೯ | 9 |
| ಮಧುಸೂದನದೇವ ... ... ... ... ... ... | ೧೧೪೮ | 10 |
| ಬಿಷ್ಟಣ್ಣ ನಾಯಕ ... ... ... ... ... | ೧೧೭೨ | 11 |
| ಭಾಸ್ಕರ ... ... ... ... ... ... | ೧೧೨೭ | 12 |
| ಭಾಸ್ಕರ ... ... ... ... ... ... | ೧೧೮೬ | 13 |
| ಉದಯಾದಿತ್ಯ ... ... ... ... ... ... | ೧೧೯೮ | 13 |
| ಲಕ್ಷ್ಮೀಧರ-ಮಧುರ ... ... ... ... ... | ೧೪೧೦ | 15 |
| ಪರಿಶಿಷ್ಟ 1—ಕನ್ನಡ ನಾಟಕ ... ... ... ... ... | ... | 18 |
| ಪರಿಶಿಷ್ಟ II—'ರಚಿಸು' ಎಂಬುದಕ್ಕೆ ಪರ್ಯಾಯ ಪದಗಳು ... ... ... | ... | 20 |
| Index to the Preface ... ... ... ... ... | ... | 23 |
| ಅನುಕ್ರಮಣಿಕೆ ... ... ... ... ... ... | ... | 25 |

# PREFACE.

Of the cultivated languages of the South, Kannada or Karṇāṭaka stands second to none. The Karṇāṭaka country and the Karṇāṭaka language are of great antiquity.[1] "Karṇāṭaka" is mentioned by Pāṇini, Vātsyāyana and [2] Varāhamihira. The mention of Banavāsi, the capital of the Kadambas in Aśōka inscriptions, the mention of Erumaiyūran in Tamil Sangam literature, and the discovery of the papyri at Oxyrhynchus [3] in Lower Egypt are too well known to require repetition.

Some scholars hold that there must have existed quite a large number of Kannada works during the days of Buddhistic supremacy over the Karṇāṭaka, which have been lost to us now. In their opinion Nāgārjuna, Vimalōdaya, and others mentioned by Nripatuṅga in his *Kavirājamārga* are Buddhist authors. But according to some others Buddhism does not seem to have made much headway in the Karṇāṭaka, their argument being that not even a single Buddhistic work is available in the whole range of Karṇāṭaka literature.

When Jainism took the place of Buddhism in the Karṇāṭaka, Kannaḍa was highly cultivated under the patronage of the ruling families and even became a vehicle of their religious literature. In the course of a few centuries the Jains produced poets like Ādi-Pampa, Ranna, Janna and Honna, rhetoricians like Nripatuṅga Nāgavarma and Udayāditya, and scientists like Rājāditya, Chandrarāja and Kīrtivarma. With the beginning of the rise of Basava in the 12th century Jain authors in Kannada began to disappear, their place being taken by the Vīraśaivas and the Vaishṇavas. Vīraśaivism was also a mass-movement and naturally gave a great impetus to the language of the masses. The classic *Chaṁpū* style of the Jains fell into disuse and the popular *Shaṭpadi*, *Ragaḷe*, *Sāṅgatya* and *Vachana* took its place.

The beginning of the 16th century saw the Brāhmanic counter-revival. The Bhakti cult or *Mārga*, the dominant religious movement of this period, produced Poet-saints like Purandaradāsa, Kanakadāsa, Jagannāthadāsa and a host of others. Their *Shaṭpadis*, songs and narratives form the sweetest of the Kannada literature of this period. "It is not to be understood, however, that the above periods of Jaina, Vīraśaiva and Vaishṇava literatures are marked off from one another by hard and fast lines, and that during the literary predominance of one sect no works originated with the others."

The advent of the British and the introduction of the European system of education have had their own effect on Kannaḍa literature. We have to-day a large number of poets and dramatists, who have composed original works and translated from the best western writers; but even the best work of this period cannot stand comparison with a third rate work of any of the former three periods. It is because the age is barren and devoid of imagination.

Systematic enquiry and scientific research in regard to Kannada language and literature largely owe their origin to western scholars like the Rev. Kittel and Mr. Rice. It was Rev. Kittel who for the first time collected and published an account of a few Kannada poets in his preface to Nāgavarma's *Chhandōmbudhi*, in 1875. He was followed by Mr. Rice who published a somewhat fuller account of Kannada poets in his introduction to Bhaṭṭākalaṁka's *Śabdānuśāsana*. "These accounts are necessarily brief and incomlpete and contain a few statements which recent research has shown to be incorrect. Further, being written in English, their accounts though useful to the English-knowing Kannadigas, are not of much use to the bulk of the Kannadigas who are ignorant of English." In 1907 appeared the first volume of the "Lives of Kannada Poets" (up to the 14th century), the life-long labours of the late S. G. Narasimhacharya, whose sound scholarship and poetical skill commanded admiration from all the Kannaḍigas, and of Rao Bahadur R. Narasimhacharya, Director of Archæological Researches in Mysore (since retired). Twelve years

[1] Fleet's *Dynasties of the Kanarese Districts*, pp. 3 and 4 and p. 42, footnote 1. Bühler's note; pages 27 and 28 of his introduction to Bilhaṇa's Vikramāṅkadēvacharita; *Lives of Kannada Poets*, Vol. II, Introd. p. 1.

[2] *Lives of Kannada Poets*, Vol. II, Introd. p. 4.

[3] Journal of the Royal Asiatic Society for 1904, pp. 399 ff.

passed before the second volume appeared, and we have to-day the *Lives of Kannada Poets* brought up to the end of the 17th century. The able scholar, Mr. R. Narasimhacharya, promises us his third and last volume shortly which is to bring the work up to date.

The object of this memoir is to supplement the two volumes of the *Lives of Kannada Poets* and place before the public a few additional names of Kannada poets who are mentioned in inscriptions. South-Indian History, it must be understood, is largely dependent upon South-Indian Epigraphy for its material, political, social, religious or literary. As will be seen in the body of the article, much of the matter in the sequel has been taken from the Madras Annual Reports on Epigraphy and from other published Epigraphical literature. Kannada inscriptions in general and those of the Chāḷukya, Rāshṭrakūṭa, Yādava and Hoysala in particular, are in themselves excellent specimens of literary composition. Some of them read like little Champū-Kāvyas (e.g. see *Epigraphia Indica*, Volume XIII, page 326), and in some cases the names of the Poets who composed these records are given. The authors of the *Lives of Kannada Poets* have already brought to light nearly seventy poets mentioned in inscriptions. In a few cases only their names are preserved. Still their mention cannot be undervalued; for it is not unlikely that some day their works may be discovered and their importance established.

In the Office of the Assistant Archæological Superintendent for Epigraphy, Madras, are a number of Kannada inscriptions which are not yet published. Some of these are indeed literary productions worth recording as *Kāvyas*. An inscription of the time of the Vijayanagara King Krishṇadēvarāya mentions a drama *Tāyikunda-Nāṭaka* by name. It also states that women appeared on the stage. Others introduce people who had directly or indirectly advanced the cause of literary production. Daṇḍanāyaka Dāmapayya of Uchchangi (Madras Epigraphical collection for 1899, No. 135) is called 'sakala-vidvajjanāmritārnava-pūrnachandra,' 'chatura-chaturmukha' and 'bhāshā-chaturbhuja'; Sītādēvī wife of Tribhuvanamalladēva-Chōḷa-Mahārāja, was a great scholar and a patron of letters, and is referred to in the following terms: 'āśritavibudhajana-sudhe', 'kavi-gamaki-vādi-vāgmīndra-vaitāḷika-pāṭhakādijana-paritushṭe' (ibid. No. 121); Padmaladēvī, wife of Tribhuvanamalla, was called 'abhinava-Sarasvatī' and 'sakala-kalādhari' (ibid. for 1913, No. 122); Rebbanabbe, wife of Raviga-Chamūpa, seems to have been the greatest poetess of the time and is addressed as 'pratibhā-Sarasvatī,' 'sakala-kalā-pravīṇe' and 'kavipravaranute' (ibid. No. 128). There are a few important records, fully discussed in the sequel, which help us immensely not only in identifying some authors already familiar to Kannada literature, but in revealing to us some valuable details about their lives of which the literary world has been in the dark till now. The following are some of the instances :—

(1) Udayāditya the author of an Alaṅkāra work in Kannaḍa and Udayāditya, the ruler of Pennapari-nāḍu with its capital at Tāḍpatri (Madras Epigraphical collection for 1892, No. 338) are possibly not two different persons.

(2) Lakshmīdhara, the Minister of Dēvarāya II and a nephew of Mādhavāchārya the famous Advaita protagonist, was not only a patron of letters but also a great poet himself (Inscription No. 38 of 1889).

(3) Nārāyaṇa-Bhaṭṭa, the donee of the Nandamapūṇḍi grant of Rāja-Rāja-Narēndra, was a great poet in Saṁskṛita, Karṇāṭaka, Prākṛita and Āndhra.

I take this opportunity of tendering my sincere thanks to Sir John Marshall, *Kt.*, C.I.E., etc., Director-General of Archæology in India, for allowing me to publish this note as a Memoir of the Archæological Survey of India in Kanarese. My special thanks are due to Rao Bahadur H. Krishna Sastri, Government Epigraphist, for his continuous encouragement and his valuable suggestions in the preparation of the present note.

T. T. SHARMAN.

# ಶಿಲಾಶಾಸನಗಳಲ್ಲಿ ಕಂಡ ಕರ್ಣಾಟಕ ಕವಿಗಳು.

ದಿವಾಕರ ; ಕ್ರಿ.ಶ. ೮೩೪ (ಸುಮಾರು).[1]

ಸೇಲಂ ಜಿಲ್ಲೆಗೆ ಸೇರಿದ ಧರ್ಮಪುರಿಯಲ್ಲಿ ದೊರೆತ ಒಂದು [2]ಶಾಸನದಿಂದ ಈ ಊರಿಗೆ ಬಹು ಪುರಾತನಕಾಲದಿಂದಲೂ ತಗಡೂರೆಂಬ ಹೆಸರಿದ್ದಂತೆ ತಿಳಿಯಬರುತ್ತದೆ. ದಕ್ಷಿಣ ಹಿಂದೂಸ್ಥಾನದ ಪ್ರಾಚೀನ ಚರಿತ್ರೆಯಲ್ಲಿ ತಗಡೂರು ಬಹು ಹೆಸರುವಾಸಿ ಪಡೆದಿದ್ದಿತು. ತಮಿಳು ಸಾಹಿತ್ಯಸಂಘದ ಕಾಲದಿಂದಲೂ ಪ್ರಸಿದ್ಧವಾದ ಈ ತಗಡೂರು ಮೇಲೆ ಹೇಳಲ್ಪಟ್ಟ ಶಾಸನದಿಂದ ಮಹದೈಶ್ವರ್ಯಯುಕ್ತವಾದದ್ದೆಂತಲೂ, ದುರ್ಗಮವಾದ ಕೋಟೆ ಕೊತ್ತಲಗಳಿಂದಲೂ, ಅದ್ಭುತವಾದ ಅರಮನೆಗಳಿಂದಲೂ, ರಮ್ಯವಾದುಪವನಗಳಿಂದಲೂ, ಚಿತ್ರತರ ದೇವಾಲಯಗಳಿಂದಲೂ, ಕೂಡಿಕೊಂಡು[3] ಜೈನ ಶೈವ ಮತಗಳಿಗೆ ಆಶ್ರಯ ಸ್ಥಾನವಾಗಿದ್ದಿತೆಂತಲೂ ಕಂಡು ಬರುತ್ತದೆ.

ಮೇಲೆಕಂಡ ಈ ಅಮುದ್ರಿತಶಾಸನದಲ್ಲಿ ಮೂರು ವೃತ್ತಗಳೂ ಒಂದು ಕಂದಪದ್ಯವೂ ಇವೆ. ಶೈವ ಗುರುವೂ ಮಹಾವಿದ್ವಾಂಸನೂ ಆದ ವಿದ್ಯಾರಾಶಿ (ವಿದ್ದರಾಸಿ) ಯೆಂಬ ಒಬ್ಬನು ಸ್ತುತಿಸಲ್ಪಟ್ಟಿರುತ್ತಾನೆ. ಈ ಶಾಸನವನ್ನು "ಬರದೋಂ ಸನ್ನ ದಿವಾಕರ" ನೆಂಬದಾಗಿ ಮೂರನೆಯ ವೃತ್ತದಲ್ಲಿ ಹೇಳಿದೆ. ಈ ಶಾಸನದ ಕಾಲವನ್ನು ನಿರ್ಣಯಿಸಲು ಇದರಲ್ಲಿ ಇನ್ನಾವ ಸಾಧಕಸಾಮಗ್ರಿಗಳೂ ಇಲ್ಲ.

ಆದರೆ ಪುದುಕೋಟೆ ಸಂಸ್ಥಾನದಲ್ಲಿರುವ ಕೊಡುಂಬೈ ಅಥವಾ ಕೊಡುಂಬಾಳೂರು ಎಂಬ ಊರಲ್ಲಿ ಸಿಕ್ಕಿದ ಒಂದು ಶಾಸನದ ಸಹಾಯದಿಂದ ಈ ಶಾಸನದ ಕಾಲವನ್ನು ನಿಶ್ಚಯಿಸಬಹುದು. ರಾಯಬಹದ್ದೂರ್ ವೆಂಕಯ್ಯನವರು ಕೊಡುಂಬಾಳೂರು ಶಾಸನದ ಕಾಲವು ಕ್ರಿ.ಶ. ೧೦ ನೆಯ ಶತಮಾನವಾಗಿರಬೇಕೆಂದು [4]ನಿಶ್ಚಯಿಸಿರುವರು. ಇದು ತೃಪ್ತಿಕರವಾಗಿ ಕಾಣುವುದಿಲ್ಲ. ಕೊಡುಂಬಾಳೂರು ಶಾಸನದಲ್ಲಿಯೂ ಕಾಲವನ್ನು ಕೊಟ್ಟಿಲ್ಲ. ಆದರೆ ಅಲ್ಲಿ ಆಳುತ್ತಿದ್ದ ಅರಸುಮನೆತನದವರ ವಂಶವೃಕ್ಷವೊಂದು [5]ಕೊಡಲ್ಪಟ್ಟಿದೆ. ಈ ಮನೆತನದ ಭೂತಿವಿಕ್ರಮಕೇಸರಿಯು ಆತ್ರೇಯಗೋತ್ರದ ಕಾಲಾಮುಖಸಂಪ್ರದಾಯದವರ ಮುಖ್ಯಗುರುವಾದ ಮಧುರೆಯ ಮಲ್ಲಿಕಾರ್ಜುನನಿಗೆ ಮಠವೊಂದನ್ನು ಕಟ್ಟಿಸಿಕೊಟ್ಟಂತೆಯೂ, ಆ ಮಲ್ಲಿಕಾರ್ಜುನನು ವಿದ್ಯಾರಾಶಿ, ತಪೋರಾಶಿ ಎಂಬ ಗುರುಗಳ ಶಿಷ್ಯನಾಗಿದ್ದಂತೆಯೂ ತಿಳಿಯಬರುತ್ತದೆ. ತಗಡೂರು ಶಾಸನದಲ್ಲಿ ಉಕ್ತವಾಗಿರುವ ಶೈವಗುರು ವಿದ್ಯಾರಾಶಿಯು ಮಲ್ಲಿಕಾ

---

[1] [ಹೀಗೆಯೇ ಮುಂದೂ ಎಲ್ಲ ಕವಿಗಳ ಕಾಲನಿರ್ಣಯವನ್ನೂ ಭಾವಿಸಬೇಕು.—Ed.]

[2] Madras Epigraphical collection for 1901, No. 309.

[3] *Ibid.* for 1911, page 61, paragraph 14 and *Epigraphia Indica*, Vol. X., page 64.

[4] Madras Epigraphical collection for 1907, No. 129 and paragraphs 85 ff. of Madras Annual Report on Epigraphy for 1908.

[5] ಪರವೀರಜಿತ್[6]

ವೀರತುಂಗ

[ಪುಳಿಪಿಡ್ಡಂಗಿ]

ಅತಿವೀರ

ಅನುಪಮ

ನೃಪಕೇಸರಿ

ಪರದುರ್ಗಮರ್ದನ

[ವಾತಾಪಿಯನ್ನು ಗೆದ್ದನು]

ಸಮರಾಭಿರಾಮ

[ಇವನಿಗೆ 'ಯದುವಂಶಕೇತು' ಎಂದೂ ಹೆಸರುಂಟು. ಇವನು ಅಧಿರಾಜಮಂಗಲದ ಕೊಳ್ಳಿಗಳದಲ್ಲಿ ಒಬ್ಬ ಚಾಳುಕ್ಯನನ್ನು ಕೊಂದನು. 'ಅನುಪಮಾ' ಎಂಬೊಬ್ಬ ಚೋಳರಾಜಪುತ್ರಿಯನ್ನು ಕೈಹಿಡಿದನು.]

ಭೂತಿವಿಕ್ರಮಕೇಸರಿ.

[ಇವನು ಕಾವೇರೀತೀರದಲ್ಲಿ ಪಲ್ಲವರನ್ನೊಕ್ಕಲಿಕ್ಕಿದನು ; ರಣಾಂಗಣದಲ್ಲಿ ವೀರಪಾಂಡ್ಯನನ್ನು ಹೊಡೆದೋಡಿಸಿದನು ; ವಂಜವೇಳನ್ನು ನಾಶಮಾಡಿದನು ; ಕಟ್ರಳಿ, ವರಗುಣಾ ಎಂಬಿಬ್ಬರು ರಾಜಪುತ್ರಿಯರನ್ನು ಮದುವೆಯಾಗಿ ಕೊಡುಂಬಾಳೂರಲ್ಲಿ ಆಳುತ್ತಿದ್ದನು.]

ಕಟ್ರಳಿ ಗರ್ಭದಲ್ಲಿ

ಪರಾಂತಕವರ್ಮ | ಆದಿತ್ಯವರ್ಮ

ರ್ಜುನನ ಗುರುವಾದ ವಿದ್ಯಾರಾಶಿಯೇ ಆಗಿರಬೇಕೆಂದು ಊಹಿಸಲು [1] ಅವಕಾಶವುಂಟು. ಭೂತಿವಿಕ್ರಮಕೇಸರಿಯ ಕಾಲವನ್ನು ನಾವು ನಿರ್ಧರಿಸಿದ್ದೇ ಆದರೆ ವಿದ್ಯಾರಾಶಿಯ ಕಾಲವನ್ನು ನಿರ್ಧರಿಸಿದಂತೆಯೇ ಆಯಿತು.

ಭೂತಿವಿಕ್ರಮಕೇಸರಿಯ ತಾತನಾದ ಪರದುರ್ಗಮರ್ದನನು ವಾತಾಪಿನಗರವನ್ನು ಗೆದ್ದನೆಂದು ವಂಶ ವೃಕ್ಷದಿಂದ ತಿಳಿದೆವು. ಆದಕಾರಣ ಪರದುರ್ಗಮರ್ದನನು ಚಳುಕ್ಯ ಎರಡನೆಯ ಪುಲಕೇಸಿ ಮತ್ತು ಪಲ್ಲವ ಮೊದಲನೆಯ ನರಸಿಂಹವರ್ಮ ಇವರುಗಳ ಸಮಕಾಲಿಕನೆಂದು ಸಿದ್ಧಾಂತವಾಯಿತು. ಪಲ್ಲವಚಕ್ರವರ್ತಿ ನರಸಿಂಹವರ್ಮನು ವಾತಾಪಿಯಮೇಲೆ ದಂಡೆತ್ತಿಹೋಗಿ ಆ ಪಟ್ಟಣವನ್ನು ನಾಶಮಾಡಿದನೆಂಬುದು ಎಲ್ಲರಿಗೂ ತಿಳಿದ ನಿರ್ವಿವಾದಾಂಶವಾಗಿಯೇ ಇದೆ. ನರಸಿಂಹವರ್ಮನು ವಾತಾಪಿಯಮೇಲೆ ದಂಡೆತ್ತಿ ಹೊರಟಾಗ ಸಿಂಹಳದ್ವೀಪದ ರಾಜಕುಮಾರನಾದ ಮಾನವರ್ಮನೂ [2] ಅರುವತ್ತುಮೂರು ಶೈವಭಕ್ತರಲ್ಲೊಬ್ಬನಾದ ಶಿರುತ್ತೊಂಡನಾಯನಾರೂ [3] ಆ ಸೈನ್ಯದಲ್ಲಿ ದಂಡನಾಯಕರಾಗಿದ್ದರು. ಪರದುರ್ಗಮರ್ದನನೂ ನರಸಿಂಹವರ್ಮನ ಒಬ್ಬ ದಂಡನಾಯಕನಾಗಿಯೇ ಇದ್ದು ಚಳುಕ್ಯರ ಮೇಲೆ ದಂಡೆತ್ತಿ ಹೋಗಿದ್ದುದರ ಫಲದಿಂದಲೇ 'ವಾತಾಪಿನಗರಧ್ವಂಸ' ನೆಂಬ ಬಿರುದನ್ನು ವಹಿಸಲು ಅವಕಾಶವಾಗಿದ್ದಿರಬೇಕು.

ಪರದುರ್ಗಮರ್ದನನ ಮಗನೇ ಸಮರಾಭಿರಾಮನು. ಇವನಿಗೆ 'ಯದುವಂಶಕೇತು' ವೆಂದೂ ಹೆಸರುಂಟು. ಇವನೂ ತನ್ನ ತಂದೆಯಂತೆ ಚಾಳುಕ್ಯದ್ವೇಷಿಯಾಗಿದ್ದುದು ಮಾತ್ರವೇ ಅಲ್ಲದೆ ಅಧಿರಾಜಮಂಗಲದ ಬಳಿಯಲ್ಲಿ ಒಬ್ಬ ಚಾಳುಕ್ಯರಾಜನನ್ನು ಕೊಂದನು. ಕೊಲ್ಲಲ್ಪಟ್ಟ ಚಾಳುಕ್ಯನು ಯಾರಿರಬಹುದೆಂಬುದು ತರ್ಕಾಂಶವಾಗಿದೆ. ವಾತಾಪಿಯ ನಾಶನಾನಂತರ ಚಾಳುಕ್ಯರ ಪತನವು ನಿಶ್ಚಿತವಾಯಿತು. ಚಾಳುಕ್ಯಸಾಮ್ರಾಜ್ಯದ ಪುನರುಜ್ಜೀವನ ಕಾರ್ಯಕ್ಕೆ ಕೈಯಿಕ್ಕಿ ಮೊದಲನೆಯ ವಿಕ್ರಮಾದಿತ್ಯನು ಪಲ್ಲವರನ್ನು ಧ್ವಂಸಮಾಡಲಿಕ್ಕೆ ಮೊದಲೇ ಅವನಣ್ಣನಾದ ಆದಿತ್ಯವರ್ಮನು ಆ ಕೆಲಸಕ್ಕೆ ಕೈಹಾಕಿ ಭಗ್ನಪ್ರಯತ್ನನಾದಂತೆ ತೋರುತ್ತದೆ [4]. ಈ ಪ್ರಯತ್ನದಲ್ಲಿ ಆದಿತ್ಯವರ್ಮನು ಪಲ್ಲವರನ್ನು ಅಟ್ಟಿಕೊಂಡು ಬಂದು ಸಮರಾಭಿರಾಮನನ್ನ ಸಂಧಿಸಿರಬಹುದು. ಅಧಿರಾಜಮಂಗಲದ ಬಳಿ ಇವರಿಬ್ಬರಿಗೂ ಯುದ್ಧವಾಗಿ ಆದಿತ್ಯವರ್ಮನು ಪರಾಜಿತನಾಗಿ ಮೃತಿಹೊಂದಿದ್ದರೂ ಹೊಂದಿರಬಹುದು.

ಭೂತಿವಿಕ್ರಮಕೇಸರಿಯು ಈ ಸಮರಾಭಿರಾಮನ ಮಗನು. ಇವನು ತನ್ನ ತಾತ ತಂದೆಯರಂತಲ್ಲದೆ ಪಲ್ಲವರನ್ನು ಎದುರಿಸಿ ಕಾವೇರೀತೀರದಲ್ಲಿ ಒಮ್ಮೆ ಅವರನ್ನು ಸೋಲಿಸಿದನು. ಅಲ್ಲದೆ ಇವನು ವೀರಪಾಂಡ್ಯನೆಂಬೊಬ್ಬ ಪಾಂಡ್ಯರಾಜನನ್ನು ಗೆದ್ದನು. ವಂಜಿವೇಳನ್ನು ನಾಶಮಾಡಿದನು.

ಕ್ರಿಸ್ತಶಕ ೭-೮ ನೆಯ ಶತಮಾನದಲ್ಲಿ ದಕ್ಷಿಣ ಹಿಂದೂಸ್ಥಾನದ ಸಾಮ್ರಾಜ್ಯಕ್ಕಾಗಿ ವಾತಾಪಿಯ (ಪಶ್ಚಿಮ)ಚಾಳುಕ್ಯರೂ ಪಲ್ಲವರೂ ಬಹುಕಾಲ ಹೋರಾಡಿದರು. ಈ ವಿಚಾರವೆಂತಿರಲಿ. ಭೂತಿವಿಕ್ರಮಕೇಸರಿಯು ವಾತಾಪಿಯ ನಾಶನದಲ್ಲಿ ಸಂಬಂಧಿಸಿದ ಪರದುರ್ಗಮರ್ದನನಿಗೆ ಎರಡನೆಯ ತಲೆಗೆ ಸೇರಿದವನು. ಎಷ್ಟು ಈಚಿನವನೆಂದರೂ ಎರಡನೆಯ ವಿಕ್ರಮಾದಿತ್ಯನಿಗಿಂತಲೂ ಈಚಿನವನಲ್ಲ [5]. ವಿನಯಾದಿತ್ಯ ವಿಜಯಾದಿತ್ಯರ ಕಾಲದವನಾಗದಿದ್ದರೂ ಎರಡನೆಯ ವಿಕ್ರಮಾದಿತ್ಯನ ಸಮಕಾಲಿಕನಾಗಿ ಇದ್ದೇ ಇರಬೇಕು. ಈ ವಿಕ್ರಮಾದಿತ್ಯನು ಸುಮಾರು ಕ್ರಿ. ಶ. ೭೩೩ ರಲ್ಲಿ ಪಟ್ಟಕ್ಕೆ ಬಂದನು. ಅಂದರೆ ಭೂತಿವಿಕ್ರಮಕೇಸರಿ, ಮಲ್ಲಿಕಾರ್ಜುನ, ವಿದ್ಯಾರಾಶಿ, ದಿವಾಕರ ಮತ್ತು ಎರಡನೆಯ ವಿಕ್ರಮಾದಿತ್ಯ ಇವರೆಲ್ಲರೂ ಸಮಕಾಲಿಕರಾದರು.

ಈ ಕಾರಣಗಳಿಂದ ನಾವು ತಗಡೂರು ಶಾಸನವು ೮ ನೆಯ ಶತಮಾನದ್ದೆಂದು ನಿಶ್ಚಯಿಸಬೇಕಾಗಿದೆ. ಇದೇ ಅಭಿಪ್ರಾಯವೇ 'ಎಪಿಗ್ರಾಫಿಯಾ ಇಂಡಿಕ [6]' (Epigraphia Indica) ದಲ್ಲಿಯೂ ಸೂಚಿಸಲ್ಪಟ್ಟಿದೆ.

ಇಷ್ಟೇ ಅಲ್ಲದೆ ಶಾಸನ ಭಾಷೆಯನ್ನು ಕೊಂಚ ಪರಿಶೀಲಿಸಿ ನೋಡಿದರೆ ಮೇಲಿನ ಊಹೆಯನ್ನೇ ಸ್ಥಿರಪಡಿಸುತ್ತದೆ. 'ಬರೆದೋನ್' 'ವಣ್ಣಿಪ್ಪೋಂ' 'ಬಣ್ಣಿಪ್ಪೋಂ' ಎಂಬೀ ಪ್ರಯೋಗಗಳು ಕೇವಲ ಹಳಗನ್ನಡ. ಅಂದರೆ ಕ್ರಿ. ಶ. [7] ೮ ನೆಯ ಶತಮಾನಕ್ಕಿಂತಲೂ ಈಚಿನದಲ್ಲವೆಂದು ದೃಢವಾಗಿ ಹೇಳಬಹುದು.

---

[1] *Epigraphia Indica*, Vol. X, page 64, footnote 4.

[2] George Tournour's *Mahávamsa*, Chapter XLVII, pages 41—43.

[3] *Historical Sketches of Ancient Deccan* by Mr. K. V. Subrahmanya Aiyar, Vol. I, p. 38 f.

[4] Fleet's *Dynasties of the Kanarese Districts*, page, 367. [ಈ ಊಹೆಯನ್ನು ಡಾಕ್ಟರ್ ಫ್ಲೀಟರವರು ಮಾಡಿದರೇ ಹೊರ್ತು ಪ್ರೂಫಿಲ್ಲ—ಹೊ.ಕೃ.]

[5] ರಾವ್ ಬಹದ್ದೂರ್ ವೆಂಕಯ್ಯನವರು ಕಾರಣಾಂತರಗಳಿಂದ ಭೂತಿವಿಕ್ರಮಕೇಸರಿಯು ಆದಿತ್ಯಕರಿಕಾಲನಿಗೂ, ಅವನ ತಂದೆ ಎರಡನೆಯ ಪರಾಂತಕನಿಗೂ ಸಮಕಾಲಿಕನೆಂದು ಹೇಳುತ್ತಾ, ಈ ಭೂತಿವಿಕ್ರಮಕೇಸರಿಯ ತಾತ ಪರದುರ್ಗಮರ್ದನನು 'ವಾತಾಪಿಧ್ವಂಸನ' ನೆಂದು ಕೊಡುಂಬಾಳೂರು ಶಾಸನದಲ್ಲಿ ಹೇಳಿಕೊಂಡಿರುವುದು ಕೇವಲ ಔಪಚಾರಿಕವಾದದ್ದೆಂದು ಸೂಚಿಸಿರುವರು. ಈ ವಿಷಯವು ವಿಚಾರಣೀಯವಾಗಿದೆ. [ಭೂತಿವಿಕ್ರಮಕೇಸರಿಯ ಶತ್ರುವಾದ ವೀರಪಾಂಡ್ಯನನ್ನೂ ಆದಿತ್ಯಕರಿಕಾಲನ ಶತ್ರುವಾದ ವೀರಪಾಂಡ್ಯನನ್ನೂ ಒಬ್ಬನೇಯೆಂದೆಣಿಸಿ ಅವರು ಮೊದಲನೆಯವನು ಎರಡನೆಯವನಿಗೆ ಸಮಕಾಲೀನನೆಂದರು. ಅಕ್ಷರಸಾದೃಶ್ಯವನ್ನೂ ಪರಿಗಣಿಸಿದರು.—ಹೊ.ಕೃ.]

[6] Vol. X, p. 64 and footnote 4. [ಇದು ಸರಿಯಲ್ಲ. ೯ ನೇ ಶತಮಾನದ ಕೊನೆಯೆಂದೇ ನನ್ನಭಿಪ್ರಾಯ—ಹೊ.ಕೃ.]

[7] *Lives of Kannada Poets*, Vol. 1, Introduction, page 8.

ಶಾಸನಕವಿ ದಿವಾಕರನ ವಿಚಾರವಾಗಿ ಹೆಚ್ಚೇನೂ ಈ ಶಾಸನದಿಂದ ತಿಳಿಯಬರುವುದಿಲ್ಲ. ಅನ್ಯಥಾ ಈತನು ಪ್ರಸಿದ್ಧನೂ ಅಲ್ಲ. ಇವನು ವಿದ್ಯಾರಾಶಿಯ ಶಿಷ್ಯನು; ಶೈವನು; ಈ ಶಾಸನದಲ್ಲಿ ತನ್ನ ಗುರುವನ್ನು ಸ್ತೋತ್ರಮಾಡಿರುವನು. ಕವಿತೆಯು ಪ್ರೌಢವಾಗಿದೆ. ಶಾಸನ ಪದ್ಯಗಳನ್ನು[1] ಇಲ್ಲಿ ಕೊಡುತ್ತೇನೆ.

ವೃ॥ ಕಲಿದೇವೇಶ್ವರ ಪಲ್ಲ[ವೇ]ಶ್ವರ ಮಹಾ ಭೋಗೇಶ್ವರೋತ್ತುಂಗ ನಿ-
ರ್ಮಲ ನನ್ನೇಶ್ವರ ಕೀರ್ತಿಶಾಸನಲಸತ್ಕಾಂಚೀಭುಜಂಗೇಶ್ವರಾ-।
ವಲಿ ಕಣ್ಮೇರವಕೂಪ ನನ್ದನವನ ಪ್ರಾಕಾರಸಂಸ್ಥಾನದಿ-
ನ್ನೆಲಕೆಲ್ಲಂ ಪಡಿಚನ್ದಮೆಯ್ದು ತಗಡೂರೀ ವಿದ್ಯರಾಶೀನ್ದ್ರರಿಂ ॥

ವೃ॥ ಅಕ್ಕರಿಗಂಗೆ ಬೇಡಿದ ನರಂಗೆ ತಪಸ್ವಿಗೆ ದೇಸಿಗಂಗೆ ಕ-
ಟ್ಟೊತ್ತ್ಕಲಿಗಂಗೆ ದೀನ ನಟ ಪಾಠಕ ವನ್ದಿಜನಕ್ಕೆ ರಾಗದಿ-।
ನ್ನಕ್ಕೊಡೆ ನಿನ್ದು ನೋಡಿದೊಡೆ ಮೆಚ್ಚಿದೊಡೋತೊಡೆ ಕೂರ್ತೊಡಿಗಳ್ಕ
ವ್ವಿಕ್ಕದನ್ನೀವೆ ನೆಂಬುದಿದು ಸದ್ಗುಣಂ ಸಲೆ ವಿದ್ಯರಾಶಿಯ॥

ವೃ॥ ಗುರುಗಳ್ರುದ್ರಭೋಜಗದ - - - ಗೃಹನ್ಮುಂಬೇಶ್ವರನ್ತದ್ಭುಜಂ-
ಗರ ಶಿಷ್ಯರ್ವ್ವರಲಾಕುಳಾಗಮಿಕ ವಿದ್ಯಾರಾಶಿಗಳ್ಪ್ರಸೆನಂ।
ಬರದೋಂ ಸನ್ದ ದಿವಾಕರನ್ನೆಗಲ್ದುದೀ ಭೋಗೇಶ್ವರಸ್ಥಾನಮು-
ರ್ವ್ವರೆಗೆನ್ತೊನ್ತಜೆ ನೊನ್ದಪೂಜ - ಮಿದನಿನ್ನೀ ವೆಣ್ಣೆವೋಲ್ ಬೆಣ್ಣೆವೋಲ್॥

ಕಂ॥ ಶ್ರೀಶಿವಪೂಜೆಯೊಳೊಂದು ಸದಾಶಿವಯೋಗದೊಳವೊಂದು ರೂಪಮು ರೇವಾ।
ರಾಶಿವ್ರತರೆನೆ - ವಿದ್ಯಾರಾಶಿ ಶಿವಜ್ಞಾನ ಕರ್ಮ್ಮ ನಿರ್ಮ್ಮಿತರಾದರ್ ॥

ಗುಣವರ್ಮ ; ಕ್ರಿ. ಶ. ೯೧೫.

ಕಡಪಾ ಜಿಲ್ಲೆಯ ದಾನವುಲಪಾಡು ಗ್ರಾಮದಲ್ಲಿರುವ ಶ್ರೀವಿಜಯದಂಡನಾಥನ ಶಾಸನದ[2] ಅಂತ್ಯಭಾಗದಲ್ಲಿ 'ಅನುಪಮಕವಿಯ ಸೇನಬೋವಂ ಗುಣವರ್ಮ್ಮಂ ಬರೆದೋಂ' ಎಂದಿದೆ. ಶಾಸನಬಂಧವನ್ನು ನೋಡಿದವರು ಗುಣವರ್ಮನು ಸಾಧಾರಣ ಕವಿಯೆಂದು ಹೇಳಲಾರರು. ಇವನು ಅನುಪಮಕವಿಯ ಆಶ್ರಯಕ್ಕೆ ಒಳಗಾಗಿದ್ದನೆಂದು ಕಾಣುತ್ತದೆ.

ಒಬ್ಬ ಗುಣವರ್ಮನು[3] ಶೂದ್ರಕವೆಂಬ ತನ್ನ ಗ್ರಂಥದಲ್ಲಿ "ಮಹೇಂದ್ರಾಂತಕಂ" ಇತ್ಯಾದಿ ಬಿರುದುಳ್ಳ ಒಬ್ಬ ಗಂಗ ರಾಜನನ್ನು ವಿಶೇಷವಾಗಿ ಸ್ತುತಿಸಿ, ಅವನನ್ನು ಶೂದ್ರಕರಾಜನಿಗೆ ಹೋಲಿಸಿದ್ದಾನೆ. ಮಹೇಂದ್ರಾಂತಕನೆಂಬ ಹೆಸರಿನ ಗಂಗರಾಜನು ಎರೆಯಪ್ಪನೊಬ್ಬನೇ. ಇವನು ಕ್ರಿ. ಶ. ೯೧೩ ರವರೆಗೆ ಆಳಿದನು. ಈ ಎರೆಯಪ್ಪನೇ ಗುಣವರ್ಮ್ಮನ ಪೋಷಕನಾಗಿದ್ದಿರಬೇಕೆಂದು ಕರ್ಣಾಟಕ ಕವಿಚರಿತ್ರಕಾರರು[4] ಅಭಿಪ್ರಾಯಪಡುವರು.

ದಾನವುಲಪಾಡು ಶಾಸನದ ಕವಿಯಾದ ಗುಣವರ್ಮ್ಮನೇ ಶೂದ್ರಕಗ್ರಂಥಕರ್ತನೇಕಾಗಿರಬಾರದೆಂದು ನಮ್ಮ ಪ್ರಶ್ನೆ. ಈ ಶಾಸನವು ರಾಷ್ಟ್ರಕೂಟ ಮುಮ್ಮಡಿ ಇಂದ್ರ (ನಿತ್ಯವರ್ಷ) ನ ಕಾಲಕ್ಕೆ ಸೇರಿದುದು. ಇವನ ಕಾಲವು ಸುಮಾರು ಕ್ರಿ. ಶ. ೯೧೫ ದೆಂದು ನಿಶ್ಚಯಿಸಲ್ಪಟ್ಟಿದೆ

ದಾನವುಲಪಾಡು ಶಾಸನದಿಂದ ಶ್ರೀವಿಜಯದಂಡನಾಥನ ಪರವಾದ ಕೆಲವುಪದ್ಯಗಳನ್ನು ಎತ್ತಿ ಬರೆಯುತ್ತೇನೆ. ಇಲ್ಲಿ ಕವಿಚರಿತ್ರಕಾರರು ಉದಹರಿಸಿರುವ ಪದ್ಯಗಳನ್ನು ಬಿಟ್ಟಿದ್ದೇನೆ.

ಕಂ॥ ವಸುಮತಿಯೊಳಗಿಪ್ಪಂಟುಂ ದೆಸೆಗಳ ಕುಸುಕಾರುಮನೆಯ್ದೆ ಮಾಣದೆ ಮತ್ತಂ।
ಬಿಸರುಹಗರ್ಭಾಂಡಕ್ಕಂ ಪಸರಿಸಿದುದು ಕೀರ್ತ್ತಿ ನೆಟ್ಟನನುಪಮಕವಿಯ ॥

---

[1] ಈ ಶಾಸನವಿನ್ನೂ ಮುದ್ರಿತವಾಗಲಿಲ್ಲವಾದಕಾರಣ ನಾವು ಪ್ರಕೃತ ನಿರೂಪಿಸಿರುವ ಪಾಠವು ನಿರ್ದೋಷವಾಗಿರಲಾರದು.

[2] *Epigraphia Indica*, Vol. X, pp. 150 ff.

[3] ಮಾಗಳದ ಬೇಲುಗೋಳಿ(?)ಲನ್ನಾಮಿಯ ಗುಡಿಯಲ್ಲಿರುವ ಹೊಯ್ಸಳ ವೀರಬಲ್ಲಾಳನ ಶಾಸನ ಫಲಕದಲ್ಲಿ (Madras Epigraphical collection for 1913, No. 126) ಈ ಕೆಳಗಿನ ಪದ್ಯವು ಕಾಣಬರುತ್ತದೆ.

ವೃ॥ ಗಂಭೀರಸ್ಫುರದೇಲಾಬಹಲದರಿವ್ರತೋದ್ಗೋಲಕಲ್ಲೋಲಮಾಲಾ-
ರಂಭಪ್ರೋದ್ಭಿನ್ನಫೇನಪ್ರಬಲಜಲಚರೋಲ್ಲಸತ್ಪಾಶೀನಕುಂಭ -।
ಜ್ಞಾಂಭೀರಾಭೀಳನಕ್ರಪ್ರಕರಕಮಠನೀರೇಭರತ್ನಪ್ರಭಾವ್ರೋ-
ಜ್ಜೃಂಭತ್ಕೋಪ್ರದಪ್ರಸಿಪೀಚೀನಿಜಯಾಫಳಫಣಾಧ್ವಾನರೌದ್ರಂ ಸಮುದ್ರಂ ॥

ಇದೇ ಪದ್ಯವನ್ನೇ ಗುಣವರ್ಮ್ಮನ ಶೂದ್ರಕಗ್ರಂಥದಿಂದ ತೆಗೆದುದೆಂದು ಕವಿಚರಿತ್ರಕಾರರು ಉದಹರಿಸಿರುವರು (ಕವಿಚರಿತ್ರೆ. ಸಂ. ೧. ಪು. ೬೫.)

[4] *Lives of Kannada Poets*, Vol. I, Pages 64 and 376 and Vol. II, pp. 1–2.

ಕಂ॥ ನಿರ್ಗ್ಗತಭಯ ನೀ ನರಸಂ ಸೆರ್ಗ್ಗಮ ನಾನೊಲ್ಲೆನೆಂದು ಪೇಸಿ ಬಿಸುರ್ಪ್ಪಂ।
ಸೆರ್ಗ್ಗದೆ ಭೋಗಮ ನುಂಡಪವರ್ಗ್ಗಕ್ಕಡಿಯಿಟ್ಟ ನೞದೊ ನನುಪಮಕವಿಯಂ॥

ಕಂ॥ ದಂಡಿನ ಸಾಮಗ್ರಿಗೆ ಪರಮಂಡಲ ಮಲ್ಲಾಡೆ ಸರ್ವ್ವವಿಕ್ರಮತುಂಗಂ।
ದಂಡಿನ ಬೀರಶ್ರೀಗೊಳ್ ಗಂಡಂ ಶ್ರೀದಂಡನಾಯಕಂ ಶ್ರೀವಿಜಯಂ॥

ಕಂ॥ ಚಂಡಪರಾಕ್ರಮನುಱದರಿಮಂಡಲಿಕರನಟ್ಟಿ ಪಿಡಿದು ಪತಿಗೊಪ್ಪಿಸುವ್ರೊಳ್।
ಗಂಡಂ ಪ್ರಚಂಡನೀ ಭೂಮಂಡಲದೊಳ್ದಂಡನಾಯಕಂ ಶ್ರೀವಿಜಯಂ॥

ಕವಿಕಮಲಾದಿತ್ಯ ; ಕ್ರಿ.ಶ. ೯೮೦.

ಬೆಳಗಾಂವಜಿಲ್ಲೆಯ ಸೋಗಲ್ ಎಂಬಲ್ಲಿ ಒಂದು [1]ಶಾಸನವುಂಟು. ಅದು ಇಮ್ಮಡಿ ತೈಲಪನ ಕಾಲಕ್ಕೆ ಸೇರಿದುದು. ಶಾಸನದಲ್ಲಿ ಸೋಗಲಿಗೆ ಸೋವಲ್, ಸೋಲು ಮತ್ತು ಸೋಲ್ ಎಂಬ ಹೆಸರುಗಳು ಕಾಣಬರುತ್ತವೆ. 'ಸುವರ್ಣಾಕ್ಷಿ' ಎಂಬ ತೀರ್ಥಕ್ಷೇತ್ರಕ್ಕೆ ಕಂಚಿಯಬ್ಬೆ ಅಥವಾ ಕಂಚಲೆ ಎಂಬ ಭಕ್ತಳೊಬ್ಬಳು ದಾನಧರ್ಮಗಳನ್ನು ಮಾಡಿದಳೆಂಬ ಅಂಶವು ಈ ಶಾಸನದಿಂದ ತಿಳಿದುಬರುತ್ತದೆ.

ಕಂ॥ ಭುವನಂ ವನನಿಧಿ ಸುರಗಿರಿ ದಿವಕರಳಿನಿನಚಂದ್ರರುಳ್ಳಿನಂ ಧರ್ಮ್ಮಮಿದು।
ಧ್ರುವಮಾಗಿ ನಡೆಗೆ ಶಾಸನ ಕವಿಕಮಲಾದಿತ್ಯರಚಿತಕಾವ್ಯಾವೇಶಂ॥

ಎಂಬ ತುದಿಯ ಪದ್ಯದಿಂದ ಈ ಶಾಸನವನ್ನು ರಚಿಸಿದವನು ಕಮಲಾದಿತ್ಯನೆಂದೂ, ಅವನು ಕವಿಯೆಂದೂ ಗೊತ್ತಾಯಿತು. ಇದಕ್ಕಿಂತಲೂ ಹೆಚ್ಚಾಗಿ ಈ ಶಾಸನದಿಂದ ಕಮಲಾದಿತ್ಯನ ವಿಚಾರವೇನೂ ತಿಳಿದುಬರುವುದಿಲ್ಲ. ಆದರೆ ಶಾಸನದಲ್ಲಿ :—

"ಶ್ರೀಮದನವರತದನುಜನರಾಮರಮಣಿಮಕುಟತಟಘಟಿತಪದಪದ್ಮೋದ್ಧಾಮಯುಗಳಂ ತ್ರಿಳೋಕಸ್ವಾಮಿ ಸುವರ್ಣಾಕ್ಷಿದೇವರೀಗೆಮಗೊಳ್ಪ" ಎಂದೂ,

"ಇಂತೆನಿಸುವ ಸಿದ್ಧಕ್ಷೇತ್ರಾಂತರತೀರ್ತ್ಥಕ್ಕೆ ಮುಖ್ಯನಾಶ್ರಿತಸುರಭೂಜಂ ತ್ರಿಭುವನಸಿಂಹಮುನೀಂದ್ರಂ ತಾಪಸಗೋತ್ರ ವೈರಿಕುಳಗಜಸಿಂಹ" ಎಂದೂ

"ವೃ॥ ತಪಮಂ ಮಾಡುವ ತಾಪಸರ್ಕ್ಕಳಳವಲ್ಲೋಹೋ ತನುಕ್ಲೇಶಮಂ
ಉಪಸರ್ಗ್ಗಕ್ಕಿರದಾಂತು ಮೆಯ್ಯನಟವೀಶಾಖಂಗಳಿಂ ತಿಂದುಮಾ-।
ಧಿಪನಂ ಪೂಜಿಸಿ ಮುಕ್ತಿಯೊಳ್ಧರೆಯಲೆಂದಿರ್ಪಂ ಸುವರ್ಣಾಕ್ಷಿದೇ
ವಪದಾಂಭೋಜಶಿಲೀಮುಖಾಭನೆನಿಪಂ ಶ್ರೀಗಂಗರಾಶಿವ್ರತಿ॥"

ಎಂದೂ ಶಿವನನ್ನೂ, ಶೈವ ಮುನಿಗಳನ್ನೂ ನುತಿಸಿರುವುದನ್ನು ನೋಡಿದರೆ ಕಮಲಾದಿತ್ಯನು ಶೈವನೆಂದೇ ಊಹಿಸಬೇಕಾಗುತ್ತದೆ.

ಶಾಸನದಲ್ಲಿ—

"ವೃ॥ ಬಳವಚ್ಚೋಳಮಹೀಧರೇಂದ್ರಕುಳಿಶಂ ಲಾಳೇಭ ಪಂಚಾನನಂ
ಜಳಭೂಭೃದ್ವನದುರ್ಗ್ಗಮಾರ್ಗ್ಗಜಳಧಿವ್ರಾತಕ್ಕೆಲೇ ಬಾಡವಾ-।
ನಳರೂಪಂ ರಣಕಂಭಕಕ್ಕಲಶಿರಚ್ಛೇದಂ ರಿಪೂಗ್ರಾವನೀ-
ವಿಳಯೋತ್ಪಾತವಿಕೇತು ಚಕ್ರಿತಿಳಕಂ ಶ್ರೀ ತೈಲರಾಜಾಧಿಪಂ॥"

ಎಂಬದಾಗಿ ಇರ್ಮಡಿ ತೈಲನನ್ನೂ 'ತತ್ಪಾದಪದ್ಮೋಪಜೀವಿ'

"ವೃ॥ ಜನಪತಿಚಕ್ರವರ್ತ್ತಿಪರಿರಕ್ಷಣದಕ್ಷಭುಜಾಸಿ ವೈರಿಸಾ
ಧನಲಯಕಾರಿ ರಟ್ಟಕುಳಭೂಷಣನನ್ಯನರೇಂದ್ರದರ್ಪ್ಪಭಂ।
ಜನನವದಾತಕೀರ್ತ್ತಿ ವಿಭು ಕಂಠೆಯಭಾರದೆ ನನ್ನಪಯ್ಯರಾ
ಣನ ತನಯಂ ವಿವೇಕನಿಧಿ ಕತ್ತಮಹೀಭುಜನೆಂಬ ಪೆರ್ಮ್ಮಗಂ॥"

ಎಂಬದಾಗಿ ಕೂಂಡಿವಿಷಯಾಧೀಶ್ವರನಾದ ಕತ್ತ (ಕಾರ್ತ್ತವೀರ್ಯ I) ನನ್ನೂ ಹೊಗಳಿರುವುದನ್ನು ನೋಡಿದರೆ ಕವಿಕಮಲಾದಿತ್ಯನು ರಾಜಾಶ್ರಯಕ್ಕೆ ಪಾತ್ರನಾಗಿದ್ದನೆಂದೂ, ವಿಶೇಷತಃ ಕಾರ್ತ್ತವೀರ್ಯನ ಆಸ್ಥಾನಕವಿಯಾಗಿದ್ದಿರಬಹುದೆಂದೂ ಊಹಿಸಲವಕಾಶವುಂಟು. ಇರ್ಮಡಿ ತೈಲ ಮತ್ತು ಮೊದಲನೆಯ ಕಾರ್ತ್ತವೀರ್ಯರ ಸಮಕಾಲಿಕ

[1] *Epigraphia Indica*, Vol. XVI, pp. 1 ff.

ನಾದ ಕವಿಕಮಲಾದಿತ್ಯನ ಕಾಲ ವಿಚಾರದಲ್ಲಿ ಚರ್ಚೆಯೇ ಇಲ್ಲ. ಈ ಶಾಸನವು ಶಾ. ಶ. ೯೦೩ ರಲ್ಲಿ ಬರೆಯಲ್ಪಟ್ಟಿತು. ಈ ಶಾಸನವು ಒಂದು ಕಾವ್ಯದಂತೆ ಪ್ರೌಢವಾಗಿದೆ. ಕವಿಕಮಲಾದಿತ್ಯನ ಕವಿತಾಮೃತವನ್ನು ಕನ್ನಡಿಗರು ಸವಿಯಲೋಸುಗ ಹಲವು ಪದ್ಯಗಳನ್ನು ಉದ್ಧರಿಸುತ್ತೇನೆ.

### ಸುವರ್ಣಾಕ್ಷಿಕ್ಷೇತ್ರ

ವೃ॥ ಪಂಕಜಷಂಡದಿಂದೆಸೆವ ನೆಯ್ದಿಲ ಪೂಗೊಳದಿಂ ತಳರ್ತ್ತ ಮಾ
ವಿಂ ಕುಸುಮೋದಿತಂ ಕೊಸಗುಪಾದರಿನೇೞಲಶೋಕಬಾಳೆಯಿಂ।
ಬಂಕದ ವೃಕ್ಷಜಾತಿಗಳನಿಂಚರದಿಂ ಪುಗಲೆಂಬ ಕೋಕಿಳಾ
ಳಂಕೃತದಿಂದೆ ಸಾಲಬನವೊಪ್ಪುವುದೀ ವಿಷಯಾಂತರಾಳದೊಳ್॥

ವೃ॥ ಅಲ್ಲಿಯ ನಿರ್ಜ್ಝರೋದಕದಿನೊಪ್ಪುವ ತೀರ್ತ್ಥಮಿದೀ ಜಗಕ್ಕೆ ಪೆಂ
ಪೆಲ್ಲಮನಾಂತ ಶಂಕರ ಶಯಂಭುಸುವರ್ಣ್ನಮಹಾಕ್ಷಿದೇವ ಪಾ।
ದೋಲ್ಲಸಿತಾಂಬುಜಂಗಳನೆ ಪೂಜಿಪ ಭಕ್ತಜನಕ್ಕೆ ಮುಕ್ತಿ ತ
ಳ್ವಿಲ್ಲದೆ ಕೊಡುಗೆಂದು ಪೊಗೞ್ದಂ ಕವೀಶಮದಪ್ರಭಂಜನ॥

ಕಂ॥ ಪುಲಿಗಳ ಧರ್ಮ್ಮಶ್ರವಣಮನೆಲೆ ಮಿಡುಕದೆ ಕೇಳುತಿರ್ಪ್ಪವೆರಗಿಳಗಳ್ ನಿ।
ರ್ಮ್ಮಳಮುನಿಪರೋದುವ್ರೋದಂ ಬಳವಾದೆಡೆಯೞಿದು ಪೇಳ್ವುವಿರುಳುಂ ಪಗಲುಂ॥

ಕಂ॥ ವಾನರಸಂಹತಿ ದೇವಸ್ನಾನಂ ಮಾಡುವೆರ್ಗ್ಗೆ ಗದ್ದುಗೆಯ ನೀರಂ ಸ।
ನ್ಮಾನದೆ ತಂದೀವುವೆನಲ್ಕಾನೞಿಯೆಂ ಪೊಗಳಲವರ ತಪದುಗ್ರತೆಯ॥

ಕಂ॥ ಪಾಪಿ ಪುಗಲು ಪುಗಲುಗ್ರದ ಕೋಪಿ ಪುಗಲು ಪುಗಲಶೇಷಧರ್ಮ್ಮದ್ರೋಹ।
ವ್ಯಾಪಾರಿ ಪುಗಲ್ಪುಗಲೆಂದಾಪೊರ್ತ್ತುಂ ಕೋಕಿಲಂಗಳುಲಿಗುಂ ಬನದೊಳು॥

ಕಂ॥ ಗಳಪುವರಗಿಳಿಯ ಕುಕಿಲುವ ಕಳಹಂಸೆಯ ಗಾವರಿಪ್ಪ ಪೆಣ್ದುಂಬಿಯ ಬಾ।
ವಳಸುವ ಪುರುಳಿಯ ಕೊಂಡಂಗಳನಗಿಸುವ ರವಮೆ ನಗದ ನಾಲ್ಕುಂ ದೆಸೆಯೊಳು॥

### ನಾಗವರ್ಮ ; ಕ್ರಿ.ಶ. ೧೦೪೭.

ಬಳ್ಳಾರಿಜಿಲ್ಲೆಯ ಹಡಗಲ್ಲಿ ತಾಲ್ಲೂಕಿನ ಮೈಲಾರಗ್ರಾಮದ ಸೋಮಲಿಂಗೇಶ್ವರದೇವಾಲಯದಲ್ಲಿ [1]ಶಾಸನವೊಂದುಂಟು. ಅದರಲ್ಲಿ ಚಾಳುಕ್ಯ ತ್ರೈಳೋಕ್ಯಮಲ್ಲ(ಮೊದಲನೆಯ ಸೋಮೇಶ್ವರ)ನ ಸಾಮಂತನಾದ ಕಾಳಮಯ್ಯನು ಅಥವಾ ಕಾಳಿದಾಸನು ಮೌಳಮಡುವಿನ ತೇಜೋರಾಶಿಪಂಡಿತರ ಶಿಷ್ಯರಾದ ಚೆಲ್ಲುಕಾಚಾರ್ಯರ ಮೂಲಕ ಸ್ವಯಂಭುದೇವರಿಗೂ ಮೂಲಸ್ಥಾನದೇವರಿಗೂ ದಾನ ಧರ್ಮಗಳನ್ನು ಶಾ. ಶ. ೯೬೯ ರಲ್ಲಿ ಮಾಡಿದನೆಂದು ಹೇಳಿದೆ. ಈ ಶಾಸನವನ್ನು ಬರೆದ ನಾಗವರ್ಮನೆಂಬಾತನು ಪ್ರೌಢಕವಿಯಾಗಿದ್ದಿರಬೇಕು. ಕಾಳಿದಾಸನ ಶೌರ್ಯ ಪ್ರತಾಪಗಳು ಬಹಳ ಚೆನ್ನಾಗಿ ವರ್ಣಿಸಲ್ಪಟ್ಟಿವೆ. ಶಾಸನ ಕವಿತ್ವವು ಶ್ಲಾಘ್ಯವಾಗಿದೆ. ಶಾಸನವು ಶಿಥಿಲವಾಗಿರುವುದರಿಂದ ಪದ್ಯಗಳನ್ನು ಇಲ್ಲಿ ಉದಹರಿಸಲು ಸಾಧ್ಯವಿಲ್ಲ.

ಮೇಲಿನ ಶಾಸನದಲ್ಲಿ ಉಕ್ತವಾಗಿರುವ ಕಾಳಿದಾಸನು ನೃಪಾಮರ ಆಡಳಿತಕ್ಕೆ ಒಳಪಟ್ಟ ನಾಗ್ಯೆ[2] ಎಂಬ ಊರಿನಲ್ಲಿರುವ ಅರವತ್ತುಕಂಭದ ಗುಡಿಯ ಮುಂದಿರುವ ತ್ರೈಲೋಕ್ಯಮಲ್ಲನ ಕಾಲದ [3]ಶಿಲಾಶಾಸನದಲ್ಲಿಯೂ, ಶಿವಾಲಯದ ಎದುರಿಗಿರುವ ಪಾಳುಗುಡಿಯ ಗೋಡೆಯ ಮೇಲಿನೊಂದು ತ್ರಿಭುವನಮಲ್ಲ ವಿಕ್ರಮಾದಿತ್ಯನಕಾಲದ [4]ಶಾಸನದಲ್ಲಿಯೂ ಸ್ತುತಿಸಲ್ಪಟ್ಟಿರುತ್ತಾನೆ.

ಪಾಳುಗುಡಿಯ ಗೋಡೆಯಲ್ಲಿರುವ ಶಾಸನದಲ್ಲಿ ಕಾಳಿಮರಸನನ್ನು ‘ಸಾಹಿತ್ಯವಿದ್ಯಾವಿತರ್ಕ್ಕಂ’ ‘ವಾಕ್ಸತೀಕರ್ಣಾವತಂಸಂ’ ಎಂದು ವರ್ಣಿಸಿದೆ. ಅರವತ್ತುಕಂಭದಗುಡಿಯ ಮುಂದಿರುವ ಶಾಸನದಲ್ಲಿ ವಿಶದವಾಗಿ ಕಾಳಿ

[1] Madras Epigraphical collection for 1914, No. 484.
[2] ನಾಗ್ಯೆ ಎಂಬ ಊರು ಚಿತ್ತಾಪುರದ ರೈಲ್ವೆ ಸ್ಟೇಷನ್ನಿಗೆ ಸಮೀಪದಲ್ಲಿದೆ.
[3] Madras Epigraphical collection for 1902, No. 98.
[4] *Ibid.* No. 99.

ದಾಸದಂಡಾಧೀಶನ ಅನ್ವಯ, ಶೌರ್‍ಯಪ್ರತಾಪ ಇತ್ಯಾದಿಗಳು ವರ್ಣಿತವಾಗಿವೆ. ಇದರಲ್ಲಿ ಅವನನ್ನು "ಸಾಹಿತ್ಯವಿದ್ಯಾವಿತರ್ಕ್ಕಂ" "ವಾಕ್ಸ್ತ್ರೀಕರ್ಣಪೂರವತಂಸಂ" ಎಂಬದಾಗಿ ಹೊಗಳಿದೆ. ಈ ಶಾಸನದಿಂದ ಕಾಳಿದಾಸನ ಅನ್ವಯ ಭಾಗವನ್ನಿಲ್ಲಿ ಉದ್ಧರಿಸಿರುತ್ತೇನೆ.

ಕಂ ॥ ಆ ಕಮಳಜಾತವಂಶಸುಧಾಕರದೊಳ್ಪಂಪುವೆತ್ತು ನುದ್ಧೃತಧಾತ್ರೀ ।
ಲೋಕಂ ಸ್ವೀಕೃತವಿಮಳಶ್ಲೋಕಂ ಗೋವಿನ್ದನೆಂದೆಪಿಂ ಗೋವಿನ್ದಂ ॥

ಕಂ ॥ ಕ್ಷಿತಿಸುತೆಗಂ ಕ್ಷಿತಿಗಮರುನ್ಧತಿಗಂ ರತಿಗಂ ಸರಸ್ವತೀಸತಿಗಂ ಪಾ ।
ರ್ವ್ವತಿಗಂ ಮಿಗಿಲೆನಿಪ ಮಹಾಸತಿ ತತ್ಪತಿಗೇಚಿಕಬ್ಬೆ ಕುಲವಧುವಾದಳ್ ॥

ಕಂ ॥ ಆದಂಪತಿಗೆ ತನೂಭವನಾದಂ ಶ್ರೀಕಾಳಿದಾಸದಣ್ಡಾಧಿಪನಾ ।
ಪಾದಿತವಿಶುದ್ಧಯಶನುತ್ಪಾದಿತಚಾಳುಕ್ಯರಾಜರಾಜ್ಯಾಭ್ಯುದಯಂ ॥

ಕಂ ॥ ಅನುಜಾತನಾದನಾತಂ ಗನಿಮಿಷಗುರುವೆನಿಪ ನಿಂಬದಣ್ಡಾಧಿಪನಾ ।
ತನ ತಮ್ಮನಾದನಭಿಜನವಿನುತಂ ಶ್ರೀಜಿದ್ದರಾಜದಣ್ಡಾಧೀಶಂ ॥

ಕಂ ॥ ನಯಮೆಸೆಯೆ ನೆಗಳ್ದ ಶಕ್ತಿತ್ರಯದೊಳ್ಪ್ರಭುಮಂತ್ರಶಕ್ತಿಯೆಸೆವನ್ತೆಲಸೆದಂ ।
ಪ್ರಿಯತನಯರ್ಮೂರ್ವರೊಳಂ ನಯಾನ್ವಿತಂ ಕಾಳಿದಾಸದಣ್ಡಾಧೀಶಂ ॥

ವೃ ॥ ಸಲೆ ಸತ್ಯಕ್ಕೆ ಮೊದಲ್ಬಲಕ್ಕೆ ನೆಲೆ ಧರ್ಮ್ಮಕ್ಕಾಮೂರ್ತ್ತಿ ಮಾಯಕ್ಕಗುಂ
ದಲೆ [ಬೀರ]ಕ್ಕೆ ತವರ್ಗ್ಗುಣಕ್ಕೆ ಕಣಿ ಪೆಂಪಿಂಗಿಕ್ಕೆ ಚಾಗಕ್ಕೆ ತಾ ।
ಯ್ವೊಲ ನೇಣ್ಮೆಂಗೆಡೆ [ಮಾನ್ತನಕ್ಕೆ] ಗುಡಿ ಚಾತುರ್ಯಕ್ಕೆ ಬೀಡಿಕ್ಕೆ ಕೀ
[ರ್ತ್ತಿಲತಾವಲ್ಲಿ] ಗಡಪ್ಪುರ್ ತಾನೆನಿಸಿದಂ ಸಂಗ್ರಾಮಕಂಠೀ[ರವಂ] ॥

ಕಂ ॥ ಆ ಪುಣ್ಯನಿಧಿಗೆ ವಿನಯದ ರೂಪಿನ ಭಾಗ್ಯದ ಪತಿವ್ರತಾಗುಣದೊಳ್ಪಿಂ ।
ದಾಪರಮೇಶ್ವರಿಸಚಿಗನುರೂಪೆ ಯೆನಲ್ಕೆಬ್ಬಣಬ್ಬೆ ಕುಲವಧುವಾದಳ್ ॥

ಇಂದ್ರಕೀರ್ತ್ತಿ ; ಕ್ರಿ.ಶ. ೧೦೫೫.

ತ್ರೈಲೋಕ್ಯಮಲ್ಲನ ಕಾಲದ ಶಕ. ೯೭೭ ರಲ್ಲಿ ಬರೆದ ಶಾಸನವೊಂದು ಬಳ್ಳಾರಿಯ ಜಿಲ್ಲೆಯ ಕೋಗಳಿಯ ಬಸ್ತಿಯ ಮುಂದಿರುವ ಮಂಟಪದ ಬಳಿಯುಂಟು.[1] ಇದರಿಂದ ಆ ಬಸ್ತಿಯು ಪೂರ್ವದಲ್ಲಿ ಗಂಗರಾಜನಾದ ದುರ್ವಿನೀತನಿಂದ ಕಟ್ಟಲ್ಪಟ್ಟುದೆಂತಲೂ, ಇಂದ್ರಕೀರ್ತಿಯೆಂಬೊಬ್ಬ ಜೈನಾಚಾರ್ಯನು ಆ ಬಸದಿಗೆ ಈ ಶಾಸನಕಾಲದಲ್ಲಿ ಧರ್ಮ್ಮಗಳನ್ನು ಮಾಡಿದನೆಂದೂ ತಿಳಿಯಬರುತ್ತದೆ.

ಈ ಶಾಸನದ ಶೈಲಿಯು ಬಹು ಪ್ರೌಢವಾಗಿದೆ. ಇದರಲ್ಲಿರುವ ಅತಿಸುಂದರವಾದ ತೋಮರರಗಳೆಯಲ್ಲಿ ಇಂದ್ರಕೀರ್ತಿಯನ್ನು ಕುರಿತು ಹೀಗೆ ಹೇಳಿದೆ :

"ಶ್ರೀಮದರುಹಚ್ಚರಣಸರಸಿರುಹ ಭೃಂಗ, [2] ಕೊಂಡಕುಂದಾನ್ವಯಸಮುದ್ಧರಣ ಖಮಂಡನ, ದೇಸಿಯಗಣ ಕುಮುದವನಸರಚ್ಚಂದ್ರ, ಕೋಂಕಳಪುರೇನ್ದ್ರ, ತ್ರೈಳೋಕ್ಯಮಲ್ಲ ಸದಸರಸಿಕಳಹಂಸ"

ನಾವೀತನ ವಿಚಾರವನ್ನಿಷ್ಟು ಹೇಳಲು ಕಾರಣವೇನೆಂದರೆ ಈತನನ್ನು 'ವಿಶ್ವವಿದ್ಯಾಲಲನಾಲಂಕಾರ' 'ಕವಿಜನಾಚಾರ್ಯ' 'ಪಂಡಿತಮುಖಾಂಬುರುಹಚಂಡಮಾರ್ತ್ತಂಡ' 'ಸರ್ವಶಾಸ್ತ್ರಜ್ಞ' 'ಕವಿಕುಮುದರಾಜ' 'ಕವಿಗಮಕವಾದಿವಾಗ್ಮೀಂದ್ರಕಲ್ಪದ್ರುಮ' 'ಕವಿಕದಂಬಕಕೀರಫಳಿತಚೂತದ್ರುಮ' ಎಂದು ಬಗೆಬಗೆಯಾಗಿ ಈ ಶಾಸನದಲ್ಲಿ ಹೊಗಳಿರುವುದನ್ನು ನೋಡಿದರೆ ಈತನು ಮಹಾಕವಿಯೆಂದು ತೋರುತ್ತದೆ. ಆದರೆ ಈತನು ಯಾವ ಗ್ರಂಥಗಳನ್ನು ಬರೆದಿದ್ದಾನೆಯೋ ತಿಳಿಯದು. ಮತ್ತೊಂದೆಡೆ ಈತನನ್ನು 'ತ್ರೈಳೋಕ್ಯಮಲ್ಲೇಂದ್ರಕೀರ್ತಿ ಹರಿಮೂರ್ತಿ' ಎಂದು ಹೊಗಳಿದೆ.[3]

ರಾಮಯ್ಯ ; ಕ್ರಿ.ಶ. ೧೦೪೯.

ಧಾರವಾಡ ಜಿಲ್ಲೆಗೆ ಸೇರಿದ ರೋಣತಾಲೂಕಿನಲ್ಲಿ ಸೂಡಿ ಎಂಬ ಗ್ರಾಮವೊಂದುಂಟು. ಹಿಂದೆ ಇದಕ್ಕೆ ಸೂಂಡಿ ಎಂಬ ಹೆಸರಿತ್ತು. ಕಲ್ಯಾಣಚಾಳುಕ್ಯರಕಾಲದಲ್ಲಿ ಸೂಂಡಿಯು ಕಿಸುಕಾಡೆಪ್ಪತ್ತರ ರಾಜಧಾನಿಯಾಗಿದ್ದಿತು.

---

[1] Madras Epigraphical collection for 1904, No. 37.

[2] ಕೊಂಡಕುಂದೆಯೆಂಬುದು ಈಗ ಗುತ್ತಿ ತಾಲೂಕಿನಲ್ಲಿರುವ ಕೊನಕೊಂಡ್ಲ ಎಂಬ ಗ್ರಾಮವಾಗಿರಬಹುದು.—Madras Annual Report on Epigraphy for 1916, p. 134.

[3] [ಈ ಇಂದ್ರಕೀರ್ತಿಯ ಶಾಸನವನ್ನು ಈ ವ್ಯಾಸದಲ್ಲಿ ಸೇರಿಸುವದಕ್ಕೆ ಕಾರಣವೇನೂ ಇಲ್ಲ. ಈತನು ಸ್ವಂತಂ ಕವಿಯೂ ಅಲ್ಲ. ಉತ್ತಮಕವಿಗಳಿಂದ ವರ್ಣಿತನಾದಂತೆಯೂ ಶಾಸನದಿಂದ ಕಾಣಬರುವುದಿಲ್ಲ.—ಹೊ.ಕೃ.]

ಈಗಲೂ ಈ ಯೂರಿನಲ್ಲಿ ಜೋಡುಕಲಶದ ಗುಡಿಯೊಂದುಂಟು. ಈ ಗುಡಿಯ ಬಲಭಾಗದಲ್ಲಿ ಒಂದು ಕಲ್ಲು ಹಲಗೆಯಮೇಲೆ ಒಂದು ಶಾಸನವುಂಟು[1]. ಇದು ಮೊದಲನೆಯ ಸೋಮೇಶ್ವರ (ತ್ರೈಳೋಕ್ಯಮಲ್ಲ)ನಕಾಲದ ಶಾ.ಶ. ೯೮೧ ರಲ್ಲಿ ಹುಟ್ಟಿದುದು. ಇದರಲ್ಲಿ ಸೋಮೇಶ್ವರನ ಮಹಾಪ್ರಧಾನ ದಂಡನಾಯಕ ನಾಗದೇವನು,

'ವೃ ॥ ಶಿವಗೇಹವ್ಯೂಹಖಂಡಸ್ಫುಟಿತನವಸುಧಾಕರ್ಮ್ಮನಿರ್ಮ್ಮಾಪಣಕ್ಕಂ
ಶಿವಪೂಜಾವ್ಯಾಪ್ತಿಗಂ ತಚ್ಛಿವಮುಹಿಮಮಹಾಭೋಗಸಂಪತ್ಪದಕ್ಕಂ
ಶಿವಯೋಗೀಂದ್ರಬ್ರಜಕ್ಕಂ ಶಿವಪದಯುಗಳಾನಮ್ರವಿದ್ಯಾರ್ತ್ಥಿಗಳ್ಗಂ
ಶಿವಣೂರಂ ಕೊಟ್ಟ'

ನೆಂದು ಬರೆದಿದೆ.

ಈ ಶಾಸನವನ್ನು 'ಬರೆದಂ ಸೂಂಡಿಯ ಕುಳಕರಣಿ ರಾವಪಯ್ಯ ನೀಶ್ವರಪಾದಪಂಕಜಭ್ರಮರಂ' ಎಂತಲೂ ಮತ್ತೊಂದು ಶಾಸನದಲ್ಲಿ[2] ಇವನನ್ನು 'ಭಾಸ್ಕರದಾಸ' 'ಈಶ್ವರಪಾದಾಬ್ಜಭ್ರಮರ' ಎಂತಲೂ ವಿಶೇಷಿಸಿದೆ.

ಮೇಲಿನ ಶಾಸನದ ಉತ್ಕೃಷ್ಟಭಾಷಾಶೈಲಿಯನ್ನೂ, ವಾಗ್ಧೋರಣೆಯನ್ನೂ, ಲಾಲಿತ್ಯವನ್ನೂ ನೋಡಿದರೆ ರಾವಪಯ್ಯನು ರನ್ನ ಪಂಪಾದಿಗಳಿಗಿಂತಲೂ ಯಾವ ವಿಧದಲ್ಲಿಯೂ ಕಡಮೆಯಿಲ್ಲವೆಂದು ಹೇಳಬಹುದು. ಈ ಶಾಸನವೊಂದು ಚಿಕ್ಕಕಾವ್ಯದಂತಿದೆ ಮಾದರಿಗಾಗಿ ಇದರಿಂದ ಕೆಲವು ಪದ್ಯಗಳನ್ನು ಉದಹರಿಸುತ್ತೇನೆ.

ಸೋಮೇಶ್ವರನ ಶೌರ್ಯ್ಯ.

ವೃ ॥ ಬಳವಚ್ಚೋಳನರೇಂದ್ರದರ್ಪದಳನಂ ಮಾಳವ್ಯ ಪಂಕಾರ್ಣವ
ಜ್ವಳದೌರ್ಬ್ಬಾನಳ ನಂಗವಂಗಖಸವೇಂಗೀಪಾಣ್ಡ್ಯಸೌರಾಷ್ಟ್ರಕೇ ।
ರಳನೇಪಾಳತುರುಷ್ಕಚೇರಮಗಧಕ್ಷ್ಮಾಧೀಶಧಾರಾಧರಾ
ನಿಳ ನಂಭೋಧಿವೃತಾವನೀವಳಯದೋಳ್ತ್ರೈಳೋಕ್ಯಕಣ್ಠೀರವ ॥

ನಾಗದೇವನ ಶೌರ್ಯ್ಯಪ್ರತಾಪ.

ವೃ ॥ ವಸುಧೇಶಾಗ್ರಣಿ ಚಕ್ರವರ್ತ್ತಿತಿಳಕಂ ತ್ರೈಳೋಕ್ಯಮಲ್ಲಂ ನಿಜಾ
ವಸಥಾವಾತ್ಯಪದಕ್ಕೆ ಮಾಡೆ ಮಹಿಮಾವಷ್ಟಂಭಮಂ ತಾಳ್ದಿ ಸಾ ।
ಧಿಸಿದಂ ಮುನ್ನ ಮಹಾರ್ಥ್ಯರಪ್ಪಹಿತರಂ ತದ್ದ್ರವ್ಯಮಂ ತಂದು ಪೂಂ
ಜಿಸಿದಂ ಸ್ವಾಮಿಗಪಾರಪೌರುಷಗುಣಂ ಶ್ರೀಗಂಡನಾರಾಯಣಂ ॥

ವೃ ॥ ಜಳರಾಶಿಶ್ರೇಣಿಯೊಳ್ ಪಾಲ್ಗಡಲಮರಕುಜಶ್ರೇಣಿಯೊಳ್ಪಾರಿಜಾತಂ
ಕುಳಶೈಳಶ್ರೇಣಿಯೊಳ್ ಮಂದರಮಖಿಳನದೀಶ್ರೇಣಿಯೊಳ್ಗಂಗೆ ಯೆಂತ ।
ಗ್ಗಳಮಾತ್ಮಾರಾಧ್ಯಮಿನ್ತೀ ಚತುರುದಧಿತಟೀಸ್ಫಾಳಕಲ್ಲೋಳಮಾಳಾ
ವಿಳಭಾಸ್ವದ್ಭೂರಿಭೋಗೋಳ್ಕಜನಿತವಿಭುಶ್ರೇಣಿಯೊಳ್ ನಾಗದೇವಂ ॥

ವೃ ॥ ಸುಭಟತ್ರೈಣನ್ನನ್ನರಿಲ್ಲೆಲ್ಲಿಯುಮೆನೆ ನೆಗೞ್ದಂ ಚೋಳಕಾಳಾನ್ತಕಂ ಭೋ
ಜಭುಜಂಗಾಹಿದ್ವಿಷಂ ಗೂರ್ಜ್ಜರಮದಹರಣಂ ಸೇಗುಣಧ್ವಂಸಕಂ ಚೇ ।
ರಭಯಭ್ರಾನ್ತಿಪ್ರದಂ ಕೊಂಕಣಬಳದಳನಂ ಹಾರನೀಹಾರತಾರಾ
ನಿಭಕುಂಭೇತ್ಕೀರ್ತಿ ಚಣ್ಡಾಧಿಪರೊಳತುಳದೋರ್ವ್ವಿಕ್ರಮಂ ನಾಗದೇವಂ ॥

ಸೋಮೇಶ್ವರ ಪಂಡಿತ.

ವೃ ॥ ಕ್ಷಿತಿಯೊಳ್ದಿವ್ಯಬ್ರತೀಂದ್ರಪ್ರಕರದೊಳರಮಗೆಗೊಂದುಳ್ಳತೊಂದಿಲ್ಲದೇನೆಂ
ಬ ತಪ್ಪೋವಿಖ್ಯಾತಿಯೇನೆಂಬಮಳಿನಚರಿತಖ್ಯಾತಿಯೇನೆಂಬ ವಿದ್ಯಾ ।
ಚತುರತ್ವಖ್ಯಾತಿಯೇನೆಂಬಖಿಳಗುಣಗಣಖ್ಯಾತಿಯೆಂಬೊಂದು ಪೆಂಪೂ
ರ್ಜ್ಜಿತಮಾಯ್ತೆಂದಂದೆ ಸೋಮೇಶ್ವರಯತಿಪತಿಯಂ ಬಣ್ಣಿಸಲ್ಬಲ್ಲನಾವೋಂ ॥

[1] *Epigraphia Indica*, Vol. XV. pp. 85-94.
[2] *Ibid*, page 101.

ವೃ ॥ ಸಕಳಕ್ಷ್ಮಾಪಾಳಚೂಡಾಮಣಿಕಷಣಕಿಸೋಪೇತಪಾದಾಬ್ಜ ವೈಶೇ
ಷಿಕಚೂಡಾರತ್ನ ನೈಯಾಯಿಕಸರಸಿಜಮಾರ್ತ್ತಣ್ಡ ಸಾಂಖ್ಯಪ್ರಭಾವಾ ।
ಧಿಕ ಶಬ್ದಜ್ಞಾನಪದ್ಮಾಸನ ನಿನಗೆಣೆ ಯಾರೆಂಬಿನಂ ಸನ್ದ ಮೀಮಾಂ
ಸಕಗೋತ್ರತ್ರಾಸಿ ಸೋಮೇಶ್ವರಯತಿಪತಿ ಭೂಲೋಕವಿಖ್ಯಾತನಾದಂ ॥

ಶಿಲ್ಪಿ ಶಂಕರಾರ್ಯ.

ವೃ ॥ ಕಣಿ ವಿದ್ಯಾವಿಭವಕ್ಕುದಾಹರಣೆ ಯಶಕ್ಕೋರ್ಪಾಜ್ಜನಕ್ಕೆಕ್ಕಲಾ
ವಣ ಮುದ್ಯದ್ಗುಣರತ್ನರಾಜಿಗೆಜವಟ್ಟ್ಯೌದಾರ್ಯಸಂಪತ್ತಿಗೆ ।
ಗಣಿಜೆನ್ನೀ ಗುಣಿ [1]ಶಂಕನಂ ಪೊಗಳಲುಗುಂ ಝಾತ್ಕಾರಿಝುಂಝಾಸಮೀ
ರಣಸಂಭೂತತರಂಗಸಂಭೃತಪಯೋಧಿಪ್ರಾವೃತೋರ್ಬ್ಬೀತಳಂ ॥

ನಾರಾಯಣ ಭಟ್ಟ, ಕ್ರಿ.ಶ. ೧೦೫೩.

ಗೋದಾವರೀ ಜಿಲ್ಲೆಯ ಕಲಿಕ್ಟರಿಂದ ಕಳುಹಿಸಲ್ಪಟ್ಟ ತಾಂಬ್ರಶಾಸನವೊಂದು ಈಗಲೂ ಮದರಾಸಿನ ವಸ್ತುಪ್ರದರ್ಶನ ಶಾಲೆಯಲ್ಲಿರುವುದು.[2] ಇದರಲ್ಲಿ ಪೂರ್ವಚಾಳುಕ್ಯರ ರಾಜರಾಜನರೇಂದ್ರನು ನಾರಾಯಣಭಟ್ಟನೆಂಬ ಒಬ್ಬ ಬ್ರಾಹ್ಮಣನಿಗೆ ನಂದಮಪೂಂಡಿ ಎಂಬ ಗ್ರಾಮವನ್ನು ತನ್ನ ರಾಜ್ಯವರ್ಷ ೩೨ ರಲ್ಲಿ ದಾನಮಾಡಿದನೆಂದು ಹೇಳಿದೆ. ನಾರಾಯಣಭಟ್ಟನ ವಿಷಯದಲ್ಲಿ ಶಾಸನದಲ್ಲಿ ಹೀಗೆ ಹೇಳಲ್ಪಟ್ಟಿದೆ.

" [3] ಹಾರೀತಗೋತ್ರೋ ಹರಿಮೂರ್ತ್ತಿರಾಪಸ್ತಂಬದ್ವಿಜಶ್ರೇಷ್ಠಪಿಭೂರ್ವಿನೀತಃ ।
ಸದಾ ಪುರೋಡಾಶಪವಿತ್ರವಕ್ತ್ರೋ ವಿದ್ಯಾನಭೋರ್ಕ್ಕಂಚೆನಸೋಮಯಾಜೀ ॥
ತಸ್ಯ ಶ್ರೀಮಾನ್ ಹಿಮಕರಕರಪ್ರಸ್ಫುರತ್ಕೀರ್ತ್ತಿರಾಶೀ—
ರಾಸೀತ್ಪುತ್ರಃ ಸಕಲವಿದುಷಾಮಂಚಿತಃ ಕಂಚೆನಾರ್ಯ್ಯಃ ।
ಯಂ ಮನ್ಯಂತೇ ಯಮಮರಿಗಣಾಃ ಕಾಮಧೇನುಂ ಕವೀಂದ್ರಾಃ
ಕ್ರೀಡಾರಾಮಂ ಪರಮಸುಹೃದೋ ಜೀವಿತಂ ಬಂಧುವರ್ಗ್ಗಃ ॥
ತಸ್ಯಾತ್ಮಜೋ ಮಹಾತ್ಮಾ ಸಮಜನಿ ಶೌಚಾಂಜನೇಯ ಇತಿ ವಿದಿತಃ ।
ಪ್ರಜ್ಞಾಜಿತವಾಚಸ್ಪತಿರಕಲಂಕಾಶಂಕನಾಮಾತ್ಯಃ ॥
ತಸ್ಯ ಚ ಸುಧರ್ಮ್ಮಪತ್ನ್ಯಾ ಗುಣಶಾಲಿನ್ಯಾಶ್ಚ ಸಾಮಕಾಂಬಾಯಾಃ ।
ಅಭವದನುಷ್ಠಿತಜಗದುಪಕರಣೋ ನಾರಾಯಣಸ್ತನಯಃ ॥
ಯಃ ಸಂಸ್ಕೃತಕರ್ಣಾಟಪ್ರಾಕೃತಪೈಶಾಚಿಕಾಂಧ್ರಭಾಷಾಸು ।
ಕವಿರಾಜಶೇಖರ ಇತಿ ಪ್ರಥಿತಃ ಸುಕವಿತ್ವವಿಭವೇನ ॥
ಕವೀನ್ಮನೀಷಾಲವದುರ್ವ್ವಿದಗ್ಧಾನ್ ಮನೋಹರಾಭಿರ್ನ್ನಿಜಸೂಕ್ತಿಭಿರ್ಯ್ಯಃ ।
ಕುರ್ವನ್ನಗರ್ವ್ವಾನ್ನ್ಯಟುಭಿರ್ಬ್ಬಭರ್ತ್ತಿ ಕವೀಭವಜ್ರಾಂಕುಶನಾಮ ಸಾರ್ಥಂ ॥

ನಾರಾಯಣಭಟ್ಟನದು ಹಾರೀತಗೋತ್ರ ; ಆಪಸ್ತಂಬಸೂತ್ರ ; ಕಂಚೆನಸೋಮಯಾಜಿಯು ಅವನ ಪ್ರಪಿತಾಮಹನು : ಕಂಚೆನಾರ್ಯನು ಅವನ ಪಿತಾಮಹನು ; ಅಕಲಂಕಾಶಂಕನಾಮಾತ್ಯನು ಅವನ ತಂದೆ ; ತಾಯಿಯು ಸಾಮಕಾಂಬೆ. ಇವನು ಸಂಸ್ಕೃತ, ಕರ್ಣಾಟ, ಪ್ರಾಕೃತ, ಪೈಶಾಚ, ಆಂಧ್ರ ಭಾಷೆಗಳೆಲ್ಲದರಲ್ಲೂ 'ಕವಿರಾಜಶೇಖರ'ನೆಂಬ ಬಿರುದೊಂದನ್ನಲ್ಲದೆ 'ಕವೀಭವಜ್ರಾಂಕುಶ' 'ಅಷ್ಟಾದಶಾವಧಾರಣ ಚಕ್ರವರ್ತಿ' 'ಸರಸ್ವತೀಕರ್ಣಾವತಂಸ' ಎಂಬನೇಕ ಬಿರುದುಗಳನ್ನು ಹೊಂದಿ ಪ್ರಸಿದ್ಧನಾಗಿದ್ದನು.

ಮೇಲಿನ ತಾಂಬ್ರಶಾಸನವನ್ನು ಬರೆದವನು ನನ್ನಿಯಭಟ್ಟನು. ಈತನೇ ಆಂಧ್ರಭಾರತಕ್ಕಾದಿಕವಿಯಾದ ನನ್ನಯಭಟ್ಟಾರಕನಾಗಿದ್ದಿರಬೇಕೆಂದು ಡಾಕ್ಟರ್ ಹುಲ್ಷ್ ಸಾಹೇಬರು ಊಹಿಸಿರುತ್ತಾರೆ.[4] ನನ್ನಯಭಟ್ಟಾರಕನು ತನ್ನ ಭಾರತದ ಆರಂಭದಲ್ಲಿ 'ಪಾಯಕ ಪಾಕಶಾಸನಿಕಿ ಭಾರತಘೋರರಣಂಬುನಂದು ನಾರಾಯಣುನಟ್ಲು ವಾನಸಧರಾಮರವಂಶವಿಭೂಷಣುಂಡು ನಾ । ರಾಯಣಭಟ್ಟು ವಾಙ್ಮಯಧುರಂಧರುಡುನ್ ತನಕಿಷ್ಟುಡುನ್ ಸಹಾಧ್ಯಾಯಿಯುನೈನ ವಾಡಭಿಮತಂಬುಗ ದೋಡಯಿ ನಿರ್ವಹಿಂಪಗನ್ ॥' ಎಂಬದಾಗಿ ಹೇಳಿರುವನು.

---

[1] ಶಂಕನಂ stands for ಶಂಕರನಂ, a form which is found in another verse.

[2] [This is marked 'Chāḷukyas, Eastern 21' in the Catalogue of copper-plate grants in the Madras Museum.—H.K.S.]

[3] Journal of the Telugu Academy, Vol. I, pages 45-62.

[4] *Epigraphia Indica*, Vol. IV. p. 303, foot-note 3.

'ಕವಿರಾಜಶೇಖರ' ನೂ 'ಕವೀಭವಜ್ರಾಂಕುಶ' ನೂ ಆದ ನಂದಮಪೂಂಡಿಶಾಸನದ ನಾರಾಯಣಭಟ್ಟನೂ ಆಂಧ್ರಭಾರತರಚನೆಯಲ್ಲಿ ನನ್ನಯನಿಗೆ ಸಹಾಯಕನಾದ ನಾರಾಯಣಭಟ್ಟನೂ ಒಂದೇ; ಇದಕ್ಕೆ ಲೇಶವಾದರೂ ಸಂದೇಹವಿಲ್ಲ.

ಕ್ರಿ.ಶ. ೧೦-೧೧ ನೆಯ ಶತಮಾನದಲ್ಲಿ ಕನ್ನಡಕವಿತೆಯು ಬಹು ಅಭಿವೃದ್ಧಿಸ್ಥಿತಿಯಲ್ಲಿದ್ದಿತು. ಚಾಳುಕ್ಯರು ಕನ್ನಡಿಗರಾದುದರಿಂದ ವೇಂಗೀಮಂಡಲದಲ್ಲಿಯೂ ಕನ್ನಡಗ್ರಂಥಗಳು ಪ್ರಚಾರದಲ್ಲಿದ್ದಿರಬೇಕು. ಆದಿಪಂಪ, ನಾಗವರ್ಮ ಮೊದಲಾದವರು ಆಂಧ್ರದೇಶದಲ್ಲಿ ಹುಟ್ಟಿ ಕನ್ನಡಕವಿಶ್ರೇಷ್ಠರೆಂದು ಪ್ರಸಿದ್ಧಿಹೊಂದಿದರು. ಆಗ್ಗ ವೇಂಗೀಮಂಡಲದಲ್ಲಿ ಪ್ರಚಾರದಲ್ಲಿದ್ದ ಭಾರತಗಳಿಗೆ ಸರಿಸಮನಾಗಿ ಆಂಧ್ರಭಾರತವನ್ನು ರಚಿಸೆಂದು ರಾಜರಾಜನರೇಂದ್ರನು ತನ್ನ ಆಸ್ಥಾನಕವಿಯಾದ ನನ್ನಯಭಟ್ಟಾರಕನಿಗೆ ಆಜ್ಞಾಪಿಸಿದಾಗ ಕನ್ನಡಭಾರತವನ್ನು ಭಾವಿಸಿದ್ದನೋ ಹೇಗೋ ರಾಜನಾಜ್ಞೆಯಂತೆ ಆಂಧ್ರಭಾರತರಚನೆಯಾಯಿತು; ಈ ಗ್ರಂಥರಚನೆಗೆ ನನ್ನಯನ ಸಹಾಧ್ಯಾಯಿಯಾದ ನಾರಾಯಣಭಟ್ಟನು ಸಹಾಯಕನಾದನು.

ಶ್ರೀಕಂಠಸೂರಿ ; ಕ್ರಿ.ಶ. ೧೦೯೯.

ಬಳ್ಳಾರಿಜಿಲ್ಲೆಯ ಕುಱುವತ್ತಿಯ ಕಲ್ಲೇಶ್ವರದೇವಾಲಯದ ಬಳಿ ಒಂದು ಶಾಸನವುಂಟು[1]. ಇದು ತ್ರಿಭುವನಮಲ್ಲನ ಕಾಲಕ್ಕೆ ಸೇರಿದುದು. ಈ ಶಾಸನದಲ್ಲಿ ಕುಱುವತ್ತಿಯ ಇನ್ನೂರ್ವ್ವರು ಮಹಾಜನಂಗಳೂ, ಅಲ್ಲಿಯಧಿಪತಿ ಕಾಳಿದಾಸನೂ, ಆವನ ಮಕ್ಕಳೂ 'ಅಭಿನವಸೋಮೇಶ್ವರದೇವರಂಗಭೋಗಕ್ಕಂ, ತಪೋಧನರಾಹಾರದಾನಕ್ಕ ಮಾಟಕೂಟಕ್ಕಂ' ಭೂಮಿಯನ್ನು ಮತ್ತು 'ಮೊಡಣಬಟ್ಟೆಯಲು ತೃಣಕಾಷ್ಠಶಾಕಫಳವಮೊದಲಾಗಿ ಬರ್ಪ್ಪ ವಸ್ತುವಿಂ ಸುಂಕಮುಮಂ' ಚಾಳುಕ್ಯವಿಕ್ರಮವರ್ಷ ೨೪ ರಲ್ಲಿ ಅಂದರೆ ಕ್ರಿ.ಶ. ೧೦೯೯ ರಲ್ಲಿ ಕೊಟ್ಟಂತೆ ಹೇಳಿದೆ. ಶಾಸನಾಂತ್ಯದಲ್ಲಿ :

ವಿದ್ಯಾವಧೂಶ್ರವಣಭಾಸುರಕರ್ಣ್ಣಪೂರಃ ಶ್ರೀಕಾಳಿದಾಸವಿಬುಧಾಧಿಪತೇಸ್ತನೂಜಃ |
ಸೋಮೇಶಶಾಸನವಚೋರಚನಾಂ ವಿಧಾಯ ಶ್ರೀಕಂಠಸೂರಿರಲಿಖದ್ವಿಬುಧೈರ್ವಿಚಾರ್ಯ್ಯಂ ||

ಎಂಬ ಪದ್ಯವೊಂದಿದೆ. ಇದರಿಂದ ಶಾಸನಕವಿಯು ಶ್ರೀಕಂಠಸೂರಿಯೆಂದು ನಿಶ್ಚಯವಾಯಿತು. ಇವನ ವಾಕ್ಪ್ರೌಢಿಯನ್ನು ಪಾಠಕರು ಸವಿಯಲೆಂದು ಹಲವು ಪದ್ಯಗಳನ್ನು ಶಾಸನದಿಂದ ಉದಹರಿಸುತ್ತೇನೆ.

ಕುಱುವತ್ತಿ

ಕಂ|| ಆ ನಾಡೊಳಗ್ರಹಾರಂ ಭೂನಾರೀಹಾರಮಧಿಕ ವಿಬುಧಾಧಾರಂ |
ಶ್ರೀವಾರಿಗಿರ[ಲ]ಗಾರಂ ಭೂನಿಧಿ ಕುಱುವತ್ತಿ ನೋಡೆ ಸೊಗಯಿಸಿ [ತೋ]ರ್ಕ್ಕುಂ ||

ಕಾಳಿದಾಸ

ವೃ|| ಭುವನವಿನೂತಕೀರ್ತ್ತಿವನಿತಾಪ್ರಿಯನೆಂದು ಪರೋಪಕಾರಿಯೆಂ
ದವನತಪಾಳನೈಕಪಟುವೆಂದು ಧರಾಮರಪೂಜ್ಯನೆಂದು ಮಾ |
ನವನಯಶಾಳಿಯೆಂದಸಮಸಾಹಸನೆಂದು ವಿನೀತನೆಂದು ಬಾ
ನ್ಧವಸುರಭೂಜವೆಂದವನಿ ಬಣ್ಣಿಸುತಿರ್ಪ್ಪುದು ಕಾಳಿದಾಸನ ||
ಕಂ|| ಪರಹಿತದೊಳು ವಿದ್ಯಾಧರಪರಿವೃಢನಂ ಸ್ವಾಮಿಭಕ್ತಿಯೊಳು ಪವನಜನಂ |
ಪರಮೌದಾರ್ಯ್ಯದೊಳಂಗೇಶ್ವರನ ನಧಃಕರಿಸಿ ಕಾಳಿದಾಸನ್ನೆಗೞ್ದಂ ||

ಕುಱುವತ್ತಿ ಇನ್ನೂರ್ವ್ವರು

ವೃ|| ಶರಣಾಯಾತಜನಕ್ಕೆ ವಜ್ರಕವಚಮ್ಮಾಱಾನ್ತ ವೀರಂಗೆ ಕೇ
ಸರಿ ಬಾಯ್ವಿಟ್ಟರದಂಗೆ ಕಲ್ಪಮಹಿಜಂ ಶಾಸ್ತ್ರಕ್ಕೆ ತಾನಾಸ್ಪದಂ |
ಪುರುಷಾರ್ತ್ಥಕ್ಕೆ ತವರ್ ಶ್ರುತಿಸ್ಮೃತಿಗೆ ತಾಂ ಲೀಳಾಗೃಹಂ ಧರ್ಮ್ಮದಾ
ಕರಮಿನ್ತೀ ಕುಱುವರ್ತ್ತಿವರ್ತ್ತಿಮಹಿದೇವಾನೀಕಮಿನ್ನೂರ್ವ್ವರು ||

[1] Madras Epigraphical collection for 1918, No. 213.

ಸೋಮನಾಥ

ವೃ ॥ ತ್ರಿಭುವನಸಂಭವಸ್ಥಿತಿಲಯಂಗಳಗೋರ್ವ್ವನೆ ಕರ್ತೃವೆಂದು ಸ
ನ್ನ ಭುವಿನಿಕಾಯಸಂಸರಣಘೋರಮಹಾರ್ಣ್ಣವಕರ್ಣ್ಣಧಾರನೆ।
ನ್ನಭಿನಯಿಪನ್ನ ದಕ್ಷಿಣಸುರಾಪಗೆಯೊಳು ನೆರೆಯಲ್ಕೆ ಬಂದನೊ
ಲ್ದಭಿನವಸೋಮನಾಥನಮರೋತ್ಕರನಾಥನನಾಥನವ್ಯಯಂ ॥

ಮಧುಸೂದನದೇವ ; ಕ್ರಿ.ಶ. ೧೧೪೮.

[ರಾವ್‌ಬಹದೂರ್ ನರಸಿಂಹಾಚಾರ್ಯರವರ ಕವಿಚರಿತೆ (ಮೊದಲನೆಯ ಸಂಪುಟ, ಪತ್ರಗಳು ೧೭೦-೧೭೨) ಯಿಂದ ಈ ಕವಿಯ ವಿಷಯವಾಗಿ ಸಕಲವೂ ನಮಗೆ ಆಗಲೇ ತಿಳಿದಿರುತ್ತದೆ. ಆದರೂ ಇಲ್ಲಿ ಉದ್ಧರಿಸಲ್ಪಟ್ಟಿರುವ ಪದ್ಯಗಳು ದಾವಣಗೆರೆಯ ಶಾಸನದವಲ್ಲದೇ ಕೊಟ್ಟುಕಲ್ಲಿನವಾದ್ದರಿಂದ ಈ ವ್ಯಾಸದಲ್ಲಿ ಸೇರಿಸಬೇಕಾಯಿತು.—ಹೊ. ಕೃ.]

ಬಳ್ಳಾರಿ ಜಿಲ್ಲೆಯ ಹಡಗಲಿ ತಾಲೂಕಿನ ಕೊಟ್ಟುಕಲ್ಲಿನಲ್ಲಿರುವ ಈ [*]ಶಾಸನವು ಇಮ್ಮಡಿ ಜಗದೇಕಮಲ್ಲನ ರಾಜ್ಯಾಭ್ಯುದಯಕಾಲದ ೧೧ ನೇ (ಶಕ. ೧೦೭೦) ವರ್ಷದಲ್ಲಿ ಹುಟ್ಟಿದುದು. ಇದರಲ್ಲಿ ಜಗದೇಕಮಲ್ಲನ ಸಾಮಂತ ವೀರಪಾಂಡ್ಯನ ಮಾತುಳನಾದ ವಿಕ್ರಮಾದಿತ್ಯನು ತುಂಗಾ ದಕ್ಷಿಣ ತೀರದಲ್ಲಿರುವ ಸ್ವಯಂಭು ಕೋಟಿಶಂಕರದೇವರಿಗೆ ದತ್ತಿಯನ್ನು ಬಿಟ್ಟಂತೆ ಹೇಳಿದೆ.

ಇಮ್ಮಡಿತೈಲನಿಂದ ಇಮ್ಮಡಿ ಜಗದೇಕಮಲ್ಲನವರೆಗೂ ರಾಜವಂಶಾವಳಿಯನ್ನೂ, ವೀರಪಾಂಡ್ಯನ ಶೌರ್ಯ ಪ್ರತಾಪಗಳನ್ನೂ ಮತ್ತು ವಿಕ್ರಮಾದಿತ್ಯನ ಗುಣವರ್ಣನೆ ಮೊದಲಾದ ಈಶಾಸನ ಭಾಗವನ್ನು ಮಧುಸೂದನದೇವನೆಂಬುವನು ಬರೆದಂತೆ ಈ ಕೆಳಗಣ ಪದ್ಯದಿಂದ ವಿಶದವಾಗುತ್ತದೆ :

ಕಂ॥ ಶ್ರೀವೀರಪಾಂಡ್ಯದೇವಮಹೀವಲ್ಲಭಮಹಿತಪಾದಪರಮಾರಾಧ್ಯ।
ಶ್ರೀವಿಶ್ರುತಮಧುಸೂದನದೇವರ್ವ್ವಿರಚಿಸಿದರಸೆಯ ಶಾಸನಕೃತಿಯಂ ॥

ಇದರಿಂದ ಮಧುಸೂದನದೇವನು ವೀರಪಾಂಡ್ಯನ ಆಶ್ರಯಕ್ಕೊಳಗಾದ ಆಸ್ಥಾನಕವಿಯೆಂಬುದು ಸ್ಪಷ್ಟವಾಯಿತು. ಈತನ ಕವಿತೆಯು ಹೃದಯಂಗಮವಾಗಿದೆ. ಈ ಶಾಸನದಿಂದ ಕೆಲವು ಭಾಗಗಳನ್ನಿಲ್ಲಿ ಉದ್ಧರಿಸುತ್ತೇನೆ.

ಕಂ॥ ಅಂತೆಸೆದ ಮೇರುಗಿರಿಯಿಂದಂ ತೆಂಕಣದೆಸೆಯೊಳೆಸೆವ ಭಾರತವರ್ಷಾ।
ಭ್ಯಂತರದೊಳಳಾಕಾನ್ತಿಯ ಕುನ್ತಳಮೆನೆ ಮುಖ್ಯವಾಯ್ತು ಕುನ್ತಳದೇಶಂ ॥

ವೃ॥ ಶ್ರೀಕಾನ್ತಾಂಭೋಜಗರ್ಭದ್ಯುಮಣಿಮಣಿಕಿರೀಟಾಂಶುಪುಞ್ಜಾಂಘ್ರಿಪೀಠಂ
ಶ್ರೀಕಣ್ಠಂ ನಾಕಸಿಂಧೂಚ್ಛಳದಮಳಲಸತ್ಫೇನಕುಂಭ[ಕೀ]ಪ್ರಸೂನಂ।
ಲೋಕೇಶಂ ವಿಕ್ರಮಾದಿತ್ಯರಸನಭಿಮತಾರ್ತ್ಥಂಗಳಂ ಮಾಳ್ಕೆ ನಿಚ್ಚಂ
ಭೂಕೃಷ್ಣಾಧ್ವಾತ್ಮಸೂರ್ಯ್ಯೇನ್ದುಕಪವನವಿಧುಬ್ಯೋಮಗಾತ್ರಂ ತ್ರಿಣೇತ್ರಂ ॥

ವೃ॥ ವಿನಯಾಂಭೋನಿಧಿಯೆಂದು ಧರ್ಮ್ಮಪರನೆಂದುದ್ದಾಮಪುಣ್ಯೈಕಭಾ
ಜನನೆಂದುರ್ವ್ವರೆ ಬಣ್ಣಿಕುಂ ವಿಬು[ಧ]ವಕ್ತ್ರೇಂದೀವರಾದಿತ್ಯನಂ।
ತನುವಿಂ ನಿತ್ಯನ ನುದ್ಯಸತ್ಯನ ನಶೇಷೋರ್ವ್ವೀತಳಸ್ತುತ್ಯನಂ
ಮನುಸಾಹಿತ್ಯನ ನರ್ಕ್ಕಜಂದೆ ಸತತಂ ಶ್ರೀವಿಕ್ರಮಾದಿತ್ಯನಂ ॥

ವೃ॥ ಆ(?)ಯದೊಳ್ವಿಕ್ರಮದೋಳ್ಪರೋಪಕೃತಿಯೊಳ್ವ್ಯಾಖ್ಯಾತಿಯೊಳ್ನೀತಿಯೊಳ್
ದಯೆಯೊಳ್ಧರ್ಮ್ಮದೊಳೌಚಿತ್ಯನೋಳ್ವಿನಯದೊಳ್ಶಂಶುದ್ಧಿಯೊಳ್ಬುದ್ಧಿಯೊಳ್।
ನಿಯತಂ ತನ್ನವೋಲನ್ಯರಾರೆನೆ ಜಗಂ ಜೀಯಂಬಿನಂ ಸಂತತೋ
ದಯಮಂ ತಾಳ್ದಿದ ಪೇರ್ಮ್ಮೆ ನೂರ್ಮ್ಮಡಿವಲಂ ಶ್ರೀವಿಕ್ರಮಾದಿತ್ಯನ ॥

ವೃ॥ ಜನಕಾಸಂಸ್ತುತನಾದನೇಕಗುಣದಿಂ ಶ್ರೀವಿಕ್ರಮಾದಿತ್ಯದೇ
ವನೊಳನ್ನೀ ಕಲಿಕಾಲಕಲ್ಮಷಮಹೀಸಂಶ್ಲಿಷ್ಟರಂ ಪಾಳಿಪೆ।
ಗ್ಗಿನೊಳೇನುನ್ನತಸತ್ವಸಂಪದದೊಳಾರಿಂದಗ್ಗಳಂ ನೋಪ್ಪರ್ದಂ
ಬಿನೆಗಂ ತಾಳ್ದಿದನತ್ಯುದಾತ್ತಚರಿತಂ ದಿಗ್ವರ್ತಿಸತ್ಕೀರ್ತಿಯಂ ॥

---

[*] Madras Epigraphical collection for 1914, No. 445.

ವೃ॥ ಸ್ಫುರತ್ತೇಜೋಜಾಳ ವೆಂಟಂ ದೆಸೆಗೆ ಪಸರಿಸಲ್ವೈರಿವೀರಾನ್ಧಕಾರಂ
ಪರೆದೋಡಲ್ಮಾನತಾಸ್ಯಾಂಬುರುಹವನವದಾನನ್ದಮಂ ತಾಳ್ದಿವಿದ್ವಿ ।
ಟ್ತರುಣೀನೇತ್ರೋತ್ಪಳಂಗಳ್ಮರಗೆ ನಿಜಚಮೂ ಚಕ್ರವಾಕೋತ್ಕರಂ ರಾ
ಗರಸಾಂಭೋರಾಶಿಯೊಳ್ಮುತ್ತಿರ್ಸೆ ಧರೆಗೆಸೆವಂ ವಿಕ್ರಮಾದಿತ್ಯದೇವಂ ॥

ವೃ॥ ಪರಮಂ ಶ್ರೀವಿಕ್ರಮಾದಿತ್ಯರಸ ನಿನಗೆ ದೀರ್ಘಾಯುಮಂ ಶ್ರೀಯುಮಂ ಕಂ
ಕರನತ್ಯಾನಂದದಿಂದಂ ಕುಡುಗೆಮರಸರಿದ್ವಾರಿಪೂರೋಚ್ಛಳಿಚ್ಛ್ರೀ ।
ಕರತಾ[ರಾ]ಧಾರಚಂಚತ್ತರುಣಶಶಿಕಳಾಕಾನ್ತಿಸನ್ಮಾನಶೋಭಾ
ಕರಮುಂಜತ್ತುಂಗಪಿಂಗದ್ಯುತಿವಿಕಟಜಟಾಜೂಟಕೋಟೀರಭಾರ ॥

ಬಿಜ್ಜಯನಾಯಕ; ಕ್ರಿ.ಶ. ೧೧೭೩.

ಬಿಜಾಪುರದ ಜಿಲ್ಲೆಯ ಅಧಿಕಾರಕ್ಕೆ ಒಳಪಟ್ಟಿರುವ ಜಾಟ್ ಎಂಬ ಸ್ವತಂತ್ರಸಂಸ್ಥಾನದಲ್ಲಿ ಮಾಡಗಿಹಾಳ್ ಎಂಬ ಗ್ರಾಮವೊಂದುಂಟು. ಇದಕ್ಕೆ ಪೂರ್ವದಲ್ಲಿ ಮಾಳಿಗೆ ಎಂತಲೂ ಮಾಳಿಕಾಪುರವೆಂತಲೂ ಹೆಸರಿತ್ತು. ಈ ಗ್ರಾಮದ ಮಹಾದೇವಾಲಯದ ಮುಂದೆ ಒಂದು [1] ಶಿಲಾಶಾಸನವುಂಟು. ಈ ಶಾಸನದಲ್ಲಿ—'ಕುಂತಳದೇಶಕ್ಕೆ ಸೇರಿದ ತರ್ದವಾಡುನಾಡಿನಲ್ಲಿ ಮಂಗಳವೇಡವೆಂಬ ಒಂದು ಪಟ್ಟಣವುಂಟು; ಅದಕ್ಕೆ ಕನ್ನಮನೆಂಬುವನು ಅಧಿಪತಿಯಾಗಿದ್ದನು; ಅವನಿಗೆ ರಾಜನೆಂಬುವನು ಹುಟ್ಟಿದನು; ರಾಜನಿಗೆ ಅಮ್ಮುಗಿ, ಸಂಕಮ ಮತ್ತು ಜೋಗಮರೆಂಬ ಮೂವರು ಮಕ್ಕಳಾದರು; ಜೋಗಮನಿಗೆ ಹೆಮ್ಮಾಡಿಯು ಹುಟ್ಟಿದನು; ಹೆಮ್ಮಾಡಿಯ ಮಗನೇ ಕಾಲಚೂರ್ಯವಂಶಸ್ಥಾಪಕನಾದ ಬಿಜ್ಜಳನು; ಬಿಜ್ಜಳನ ಮಗನು ರಾಯಮುರಾರಿ ಸೋಯಿ; ಇವನ ಆಶ್ರಿತನೇ ಮಾಳಿಗೆಯ ಪ್ರಭುವಾದ ಬಿಜ್ಜಯನಾಯಕನು. ಈ ಬಿಜ್ಜಯನಾಯಕನು ಶಾಲಿವಾಹನ ಶಕ. ೧೦೯೫ ರಲ್ಲಿ ತನ್ನೊಡೆಯನ ಹೆಸರಿನಲ್ಲಿ ಸೋಮನಾಥೇಶ್ವರ ದೇವಾಲಯವನ್ನೂ, ತನ್ನ ಹೆಸರಿನಲ್ಲಿ ಬಿಜ್ಜೇಶ್ವರ ದೇವಾಲಯವನ್ನೂ, ಅದರ ಬಳಿಯೊಂದು ಸರೋವರವನ್ನೂ ಕಟ್ಟಿಸಿದನು'—ಇತ್ಯಾದಿ ವಿಷಯಗಳು ಉಕ್ತವಾಗಿವೆ.

ಈ ಶಾಸನದ ಕವಿತ್ವವು ಬಹು ಶ್ಲಾಘನೀಯವಾಗಿಯೂ ಲಕ್ಷ್ಯಲಕ್ಷಣಯುಕ್ತವಾಗಿಯೂ ಇದೆ. ಆದರೆ ಶಾಸನದ ಕವಿಯ ಹೆಸರು ಇದರಲ್ಲಿ ಕಾಣಬರುವುದಿಲ್ಲ. ಶಾಸನದಲ್ಲಿ ಉಕ್ತವಾಗಿರುವ ಬಿಜ್ಜಯನಾಯಕನು ಅನೇಕ ಬಗೆಯಾಗಿ ಸ್ತುತಿಸಲ್ಪಟ್ಟಿರುವನು. ಒಂದೆಡೆಯಲ್ಲಿ :—

ವೃ॥ ಕಳಚುರಿರಾಜರಾಜ್ಯಗೃಹದೀಪಕನೆಂಬ ಮಹತ್ತ್ವದೇಳ್ಗೆತ
ನ್ನೊಳಗೆ ರಿಪುರಾಯದಂಡುಗೆ ಪಡಿಗ್ಗಹನೆಂಬುರುವೀರದೇಳ್ಗೆ ತಂ ।
ನೊಳಗೆ ಬುಧರ್ಗ್ಗೆಯೆ ವರ್ಣ್ಣಕವಿ ಕಂನಡಜಾಣನೆನಿಪ್ಪ ಬಲ್ಮೆ ತಂ
ನೊ[ಳ್] ನೆಲೆಸಲ್ಕುದಾತ್ತನೆನೆ ಬಿಜ್ಜಯನಾಯಕನಿರ್ದ್ದ ನುರ್ಬ್ಬಿಯೊಳ್ ॥

ವಿದ್ವಾಂಸರು ಬಿಜ್ಜಯನಾಯಕನಿಗೆ 'ವರ್ಣ್ಣಕವಿ' 'ಕನ್ನಡಜಾಣ' ಎಂಬ ಬಿರುದುಗಳನ್ನು ಕೊಟ್ಟಂತೆ ಹೇಳಿದೆ. ಮತ್ತೊಂದೆಡೆ :—

"ಸಮಸ್ತಗುಣಗಣಾಲಂಕೃತಾಭಿಧಾನ ಕಳಚುರಿರಾಜರಾಜ್ಯಪ್ರಮುಖಪ್ರಧಾನ ಗೋತ್ರಜನಚಿಂತಾಮಣಿ ಸುಜನವಿಬುಧಚೂಡಾಮಣಿ ವರ್ಣ್ಣಕವಿತಾಪ್ರವೀಣ ಕಂನಡಜಾಣ ರಿಪುರಾಯದಂಡುಪಡಿಗಹ ಸತ್ಯಸಂಗ್ರಹ ಶ್ರೀಸೋಮನಾಥಬಿಜ್ಜೇಶ್ವರದೇವಪಾದಾಂಭೋಜಭೃಂಗ ಸಾಹಸೋತ್ತುಂಗ ಮುನಿವಿಪ್ರಜನಫಳಪ್ರದಾಯಕರೆನಿಪ್ಪ ಶ್ರೀಮತು ಮಾಳಿಗೆಯ ಪ್ರಭು ಬಿಜ್ಜಯನಾಯಕರು" ಎಂಬದಾಗಿ ಹೇಳಿದೆ. ಇದರಿಂದ ಬಿಜ್ಜಯನು ರಾಯಮುರಾರಿ ಸೋವಿಯ ಪ್ರಮುಖ ಪ್ರಧಾನನೂ ಮಹಾಕವಿಯೂ ಆಗಿದ್ದನೆಂದು ತಿಳಿದು ಬರುತ್ತದೆ.

'ಕಂ॥ ಪೊಸಕಾಲದ ನವಿಲಾಟಂ ಸಿಸುಗಳ ಮುದ್ದಾಟ ಹರಿಣಹರಿಣಿಯ ನೋಟಂ ।
ರಸಿಕವಿಗಳ ಕರ್ಣಾಟಂ ಶಶಿಮುಖಿಯೊಡಗೂಟದಂತೆ ಕನ್ನಡಜಾಣಾ ॥'

ಇತ್ಯಾದಿ ಕೆಲವು ಪದ್ಯಗಳಲ್ಲಿ 'ಕನ್ನಡಜಾಣಾ' ಎಂಬ ಅಂಕಿತವು ಕಾಣಬರುತ್ತದೆ. [2] ಕರ್ಣಾಟಕಕವಿಚರಿತ್ರೆಕಾರರು ಈ ಅಂಕಿತವುಳ್ಳ ಹಲವು ಪದ್ಯಗಳನ್ನು ಉದಹರಿಸಿ "ಕವಿಗಳು ಸ್ವಕೃತಪದ್ಯಗಳ ಕೊನೆಯಲ್ಲಿ ತಮ್ಮ ಹೆಸರು ಬಿರುದುಗಳನ್ನು ಹೇಳಿಕೊಳ್ಳುವ ಸಂಪ್ರದಾಯವಿರುವುದರಿಂದ ಈ ಬಿರುದುಗಳಲ್ಲಿ ಕೆಲವಾದರೂ ಕವಿಗಳಿಗೆ ಅನ್ವ

---

[1] *Epigraphia Indica*, Vol. XV, pages 315 ff.
[2] ಸಂಪುಟ ೨, ಪುಟ ೧೭೫.

ಯಿಸ ಬಹುದೆಂದು ತೋರುತ್ತದೆ. ಆದರೆ ಕವಿಗಳು ಇಂಥವರು, ಈಕಾಲದವರು ಎಂದು ನಿರ್ಣಯಿಸುವುದು ಸಾಧ್ಯವಲ್ಲ. ಸು. ೧೫೦೦ ಎಂದು ಸ್ಥೂಲವಾಗಿ ಕಾಲವನ್ನು ಮೇಲೆ ಕೊಟ್ಟಿದ್ದೇವೆ." ಎಂಬದಾಗಿ ಬರೆದಿರುವರು. ಮೇಲಿನ ಶಾಸನದ ಬಿಜ್ಜಯನಾಯಕನು ಪ್ರೌಢಕವಿಯೆಂದೂ, ಅವನಿಗೆ ವಿದ್ವಾಂಸರೇ 'ವರ್ಣ್ಣಕಕವಿ' 'ಕನ್ನಡಜಾಣ' ನೆಂಬ ಬಿರುದುಗಳನ್ನು ಕೊಟ್ಟಿದ್ದರೆಂದೂ ತಿಳಿದೆವು. 'ಕನ್ನಡಜಾಣ'ನೆಂಬ ಅಂಕಿತವುಳ್ಳ ಪದ್ಯಗಳ ಕರ್ತೃವು ಬಿಜ್ಜಯನಾಯಕನೇ ಎಂದು ಊಹಿಸುವುದರಲ್ಲಿ ಅಸಂಭವವೇನೂ ಇರಲಾರದೆಂದು ತೋರುತ್ತದೆ. ಈ ಊಹೆಯು ಸ್ಥಿರಪಡುವುದಾದರೆ 'ಕನ್ನಡಜಾಣ' ನನ್ನು ಕ್ರಿ. ಶ. ೧೫೦೦ ರಿಂದ ಕ್ರಿ. ಶ. ೧೧೫೦ ಕ್ಕೆ ಒಯ್ಯ ಬೇಕಾದೀತು. ಇವನು ಯಾವಯಾವ ಗ್ರಂಥಗಳನ್ನು ಬರೆದಿರುವನೋ ಗೊತ್ತಿಲ್ಲ. ಬಿಜ್ಜಯನು ಚತುರ್ಥಕುಲಕ್ಕೆ ಸೇರಿದವನು.

ಕಂ ॥ ಆತನ ವಲ್ಲಭೆ ಕಾಂತಾಬ್ರಾತಶಿರೋಮಣಿ ಸರೋಜಲೋಚನೆ ವಸುಧಾ ।
ಮೋಳೆಯೆನಿಪ್ಪಳು ವಿದಿತಂ ಮಾತೇಂ ಸಾವಿತ್ರಿದೇವಿ ಮಹಿಮಾಗುಣದಿಂ ॥

ವೃ ॥ ಜನನುತ ಹಂಸಯಾನೆ ವಿಭುಬಿಜ್ಜಯನಾಯಕಚಿತ್ತಭೃಂಗಪ
ದ್ಮಿನಿ ಕಳಹಂಸಗಾಮಿನಿ ಲತಾಂಗವಿಳಾಸಿನಿ ಸಾಯಿಯಕ್ಕನೊ ।
ಳ್ಪಿನಕಣಿ ದಾನಶೀಳೆ ಗುಣಶೀಳೆ ಯಶೋಧಿಕೆ ನಿತ್ಯಪುಣ್ಯಭಾ
ಗಿನಿ ರತಿ ಗೌರಿ ಸೀತೆಯೆನಿಪಂನಳೆ ದೇವಿ ಧರಾತಳಾಗ್ರದೊಳು ॥

ಈತನ ವಂಶಾವಳಿಯನ್ನು ತಿಳಿಸುವ ಹಲವು ಪದ್ಯಗಳನ್ನು ಇಲ್ಲಿ ಉದ್ಧರಿಸುತ್ತೇನೆ :—

ಕಂ ॥ ಆ ಪುರದಧಿಪಂ ಪ್ರಭು ದಿಗ್ವ್ಯಾಪಕನಿರ್ಮಳಯಶೋವಿತಾನಂ ನುತಲ ।
ಕ್ಷ್ಮೀಪತಿ ಪರೋಪಕಾರ ಬ್ಯಾಪಾರಂ ಮಲ್ಲಗೌಂಡನುದ್ಧತಮಲ್ಲಂ ॥

ಕಂ ॥ ನೆಗರ್ದ್ದಂ ತತ್ತನಯಂ ಚಾರುಗುಣಂ ಶ್ರೀಬಲ್ಲಗೌಂಡನಾತನ ತನಯಂ ।
ಜಗತೀಜನೈಕಹಿತಮಂತ್ರಗುಣಂ ಪ್ರಭುಮಲ್ಲಗೌಂಡನನುಪಮಚರಿತಂ ॥

ಕಂ ॥ ಆತನ ಸತಿ ನುತ ಗುಣವತಿ ಸೀತಾರುಂಧತಿ ವಿವೇಕವಿದ್ಯಾಧರೆ ಭೂ ।
ಪೂತ ಪತಿಬ್ರತ ದಾನಬ್ರಾತೋನ್ನತ ಮುದ್ದಿಯಕ್ಕ ನೊಳ್ಪಂ ನೆಗರ್ದ್ದಳು ॥

ವೃ ॥ ಪೆರತದ್ದಂಪತಿಗಳ್ಗುದಾತ್ತನತುಳಂ ಶ್ರೀಶಂಭುಗಂ ಗೌರಿಗಂ
ಹರಿಗಂ ಲಕ್ಷ್ಮಿಗವಾ ಸುರಾಧಿಪತಿಗಂ ಪೌಳೋಮಿಗಂ ಷಣ್ಮುಖಂ ।
ಸ್ಮರರಾಜಂ ವಿಳಸಜ್ಜಯಂತನುದಿತಂ ಸತ್ಪುತ್ರ ನಾದಂತಿರಾ
ದರದಿಂ ಬಿಜ್ಜಯನಾಯಕಂ ತನಯನಾದಂ ಧಾತ್ರಿ ಬಾಪ್ಪೆಂಬಿನಂ

ಭಾಸ್ಕರ ; ಕ್ರಿ.ಶ. ೧೧೨೭.

ನಿಜಾಂ ಸರಕಾರಕ್ಕೆ ಸೇರಿದ ಪಟ್ಟನಚೆರುವು ಎಂಬ ಊರಿನ ಸುಬೇದಾರಕಛೇರಿಯ ಬಳಿಯೊಂದು [1]ಶಾಸನವುಂಟು. ಇದು ಚಾಳುಕ್ಯ ಭೂಲೋಕಮಲ್ಲ ಸೋಮೇಶ್ವರನ ಕಾಲದ ಚಾಳುಕ್ಯವಿಕ್ರಮ ವರ್ಷ ೫೧ ರಲ್ಲಿ (ಕ್ರಿ.ಶ. ೧೧೨೭) ಬರೆದುದು. ಇದರಿಂದ ಸೋಮೇಶ್ವರನು 'ಪಟ್ಟಬಂಧೋತ್ಸವ ಸಮಯ' ದಲ್ಲಿ ಜೋಯಿಸಿಗಂ ನನ್ನಿಯ ಭಟ್ಟರಿಗೆ 'ವಿಜಯಯಾತ್ರೆಗೆ ಲಗ್ನಮಂ ಕೊಟ್ಟ ನಿಮಿತ್ತ' ದಿಂದ ಭೂದಾನವಮಾಡಿದನೆಂದು ತಿಳಿಯಬರುತ್ತದೆ. ಶಾಸನಾಂತ್ಯದಲ್ಲಿ

'ಕಂ ॥ ನಿರತಿಶಯೋನ್ನತಮತಿ ಭಾಸ್ಕರ ಸರಸಕವೀಂದ್ರ ರಚಿತ ಶಾಸನಮಂ ಬಿ ।
ತ್ತರದಿಂ ಪ್ರತಿಕಂಟಂ ಸಾಕ್ಷರನಿಳಯಂ ತಿಟ್ಟಿ ಭಾಸ್ಕರಯ್ಯಂ ಬರದ ॥'

ಎಂಬ ಪದ್ಯದಿಂದ ಶಾಸನಕವಿಯು ಭಾಸ್ಕರನೆಂದು ಸ್ಪಷ್ಟವಾಗುತ್ತದೆ. ಈ ಸರಸಕವೀಂದ್ರ ಭಾಸ್ಕರನ ಕವಿತೆಯು ಬಹಳ ಪ್ರೌಢವಾಗಿದೆ. ಈಶಾಸನದಿಂದ ಹಲವು ಪದ್ಯಗಳನ್ನು ಉದಹರಿಸುತ್ತೇನೆ—

ವೃ ॥ ಶ್ರೀಮಚ್ಚಾಳುಕ್ಯವಂಶೋದ್ಭವ ನನುಪಮಿತೋದ್ಯದ್ಭುಜಾದಂಡಶೌರ್ಯೋ
ದ್ದಾಮಂ ವೀರಾರಿಭೂಭೃತ್ಪ್ರಕರನಿಶಿತವಜ್ರಾಯುಧಂ ಕ್ಷತ್ರವಿದ್ಯಾ ।
ಧಾಮಂ ರಟ್ಟಾನ್ವಯಾಪ್ರಬಳತರತಮಸ್ತೋಮಮಾರ್ತಾಂಡತೇಜ
ಸ್ತೋಮಂ ತಾನೆಂಬಿನಂ ಮಿಕ್ಕೆಸೆದ ನಸೆದಳಂ ತ್ರೈಲಪಕ್ಷೋಣಿಪಾಳಂ ॥

---

[1] ಈ ಶಾಸನವನ್ನು ನಿಜಾಂಸರಕಾರದ ಆರ್ಕಿಯೋಲಾಜಿಕಲ್ ಇಲಾಖೆಯ ಗ್ರಂಥಮಾಲೆಯಲ್ಲಿ ನಾನು ಶೀಘ್ರದಲ್ಲೇ ಪ್ರಕಟಿಸುವವನಿದ್ದೇನೆ.

ವೃ ॥ ಸಕಥಾಳಾಪದಿ ನಾನೆ ಪೇಳದೊಡದೇಂ ದದ್ಧದ್ಧಗಿರ್ಲ್ಲೆಂಬ ಚೋ
ಳಕಳಿಂಗಾಂಗವರಾಳವಾಳವಮರುನ್ನೇಪಾಳಪಾಂಚಾಳ ರಾ ।
ಷ್ಟ್ರಕದಂಬಂಗಳೊಳಂಕ್ಕೆ ಪೊಣ್ಮುವ ಮಹತ್ಕ್ರೋಧಾನಳೋದ್ವೃತ್ತಿಖಾ
ಪ್ರಕರಂ ಪೇಳದೆ ವಿಕ್ರಮೋನ್ನತಿಕೆಯಂ ಶ್ರೀವಿಕ್ರಮಾದಿತ್ಯನ ॥

ವೃ ॥ ಮೊಳವಿಕ್ತಿತ್ತಿದ ಕೋಳಬಾಳಜಳದಿಂ ಮಯ್ಗೊಂಡವಿತ್ರಾಂಗನಾ
ಕುಳಬಾಷ್ಪದ್ರವದಿಂ ತಳತ್ತುರ್ ರಿಪುಸೇನಾ ಚಕ್ರರಕ್ತಾಂತ್ರಬುವಿಂ ।
ಬಳದತ್ತಿಗಳಂಪಾರಿಂತಾರಿಂತಗಳುತ್ತಾತ್ಕಳಿಂಗಮಾತಂಗಸಂ
ಕುಳದಾನಪ್ಲವದಿಂ ಪರಾಕ್ರಮವನಂ ಭೂಲೋಕಮಲ್ಲಾಂಕನ ॥

ಭಾಸ್ಕರ; ಕ್ರಿ.ಶ. ೧೦೮೬.

ಚಾಳುಕ್ಯ ಸೋಮೇಶ್ವರನ ಮಹಾಪ್ರಚಂಡದಂಡನಾಯಕನಾದ ಮಾಳಪರಸನು ಸಿಂದವಾಡಿಸಾವಿರದಲ್ಲಾಳುತ್ತಿದ್ದು ಶಕ. ೧೦೦೮ ರಲ್ಲಿ ನಂದಾಪುರದ ಶ್ರೀಮಲ್ಲಿಕಾರ್ಜುನದೇವರ ನಿವೇದ್ಯ ನಂದಾದೀವಿಗೆಗೆ ಕೆಲವು ಸುವರ್ಣಾದಾಯಗಳನ್ನು ಧಾರೆಯೆರದನೆಂದು ಒಂದು [1]ಶಾಸನದಲ್ಲಿ ಹೇಳಿದೆ. ಈ ಶಾಸನವನ್ನು 'ಸುಕವಿಪದ್ಮಪ್ರಭಾಕರೋ ಭಾಸ್ಕರಃ" ಎಂಬವನು ಬರದಂತೆ ಶಾಸನದ ಕಡೆಯ ಪದ್ಯದಿಂದ ತಿಳಿದುಬರುತ್ತದೆ. ಅಲ್ಲದೆ ಈ ಕವಿಗೆ 'ಸುಕವಿಮುಖಮುದ್ರ' ನೆಂಬ ಬಿರುದೂ ಇದ್ದಂತೆ ತಿಳಿಯಬರುತ್ತದೆ. ಭಾಸ್ಕರನು ಸಂಸ್ಕೃತ ಕರ್ಣಾಟ ಭಾಷೆಗಳೆರಡರಲ್ಲೂ ಪಾಂಡಿತ್ಯವನ್ನು ಸಂಪಾದಿಸಿದ್ದನು. ಹೆಚ್ಚಿನ ವಿಚಾರವಾವುದೂ ಇದರಿಂದ ತಿಳಿಯುವುದಿಲ್ಲ. ಇದರಿಂದ ಒಂದು ಪದ್ಯವನ್ನೆತ್ತಿ ಬರೆಯುತ್ತೇನೆ—

ಕಂ॥ ಪವನಪಥದನುತ್ತಪಾಶ್ರಿತಕವಿರಾಜಜನನನ್ತನನ್ತ ಬಹುಭೋಗಧರಂ ।
ದಿವಸಕರನಂತೆ ತೇಜೋಭವನಂ ಮಾಳಪಚಮೂಪನೆಸೆವಂ ಧರೆಯೊಳ್ ॥

ಉದಯಾದಿತ್ಯ; ಕ್ರಿ.ಶ. ೧೧೯೮.

ಉದಯಾದಿತ್ಯಾಲಂಕಾರವೆಂಬ ಒಂದು ಅಲಂಕಾರ ಗ್ರಂಥವನ್ನು 'ವಸುಧಾನಾಥನ ಸೋಮನಾಥನ ಸುತಂ ಚೋಳೋದಯಾದಿತ್ಯಂ' 'ಸೋಮಮಹೀಭೃನ್ನಂದನಂ' ಎಂದು ಹೇಳಿಕೊಂಡಿರುವ ಉದಯಾದಿತ್ಯನೆಂಬಾತನು ಆವನೋ ಬರೆದಿದ್ದಾನೆ.[2] ಈತನು ಒಬ್ಬ ಸೋಮನಾಥನೆಂಬ ಚೋಳರಾಜನ ಮಗನೆಂದು ತಿಳಿಯಬರುತ್ತದೆ. ಈತನು ಪಟ್ಟಾಭಿಷಿಕ್ತನಾಗಿ ಆಳುತ್ತಿದ್ದಂತೆಯೂ ತೋರುತ್ತದೆ. ಈ ಕವಿಯ ಕಾಲವು ಸುಮಾರು ಕ್ರಿ.ಶ. 1150 ಇರಬಹುದೆಂದು ಕವಿಚರಿತ್ರಕಾರರು ಊಹಿಸಿರುವರು.

ಬಳ್ಳಾರಿ ಜಿಲ್ಲೆಗೆ ಸೇರಿದ ತಾಡಿಪತ್ರಿ ಎಂಬ ಊರಲ್ಲಿ ಪ್ರಸಿದ್ಧವಾದ ರಾಮೇಶ್ವರನ ದೇವಾಲಯವೊಂದುಂಟು. ಅದರ ರಾಜಾಂಗಣದ (ಪ್ರಾಕಾರ) ವಾಯುವ್ಯ ಮೂಲೆಯಲ್ಲಿ ಒಂದು [3]ಶಿಲಾಶಾಸನವುಂಟು. ಅದರಿಂದ 'ಭುವನಪ್ರಖ್ಯಾತಸೋಮಾನ್ವಯಜನಿತ' ಉದಯಾದಿತ್ಯಮಹಾರಾಜನೊಬ್ಬನು [4]ಪೆನ್ನಪರಿನಾಡ ರಾಜಧಾನಿಯಾದ [5]ತಾಟಿಪಾಱಪುರದ ನೆಲೆವೀಡಿನಲ್ಲಿ ರಾಜ್ಯಭಾರವನ್ನು ಮಾಡುತ್ತಿದ್ದನು; ಈ ಉದಯಾದಿತ್ಯನ ತಂದೆ ಸೋಮಿದೇವನು; ಉದಯಾದಿತ್ಯನು ಶಕ ವರ್ಷ ೧೧೨೦ ನೆಯ ಕಾಳಯುಕ್ತ ಸಂವತ್ಸರದ ಮಾಘ ಬ. ೧೫ ಬೃಹಸ್ಪತಿವಾರದ ಸೂರ್ಯಗ್ರಹಣದಂದು ಅಲ್ಲಿಯ ಚಂದ್ರನಾಥಪಾರ್ಶ್ವನಾಥ ದೇವರುಗಳ ಬಸದಿಯ "ಖಂಡಸ್ಫುಟಿತ ಜೀರ್ಣೋದ್ಧಾರಕ್ಕಂ ದೇವರಷ್ಟವಿಧಾರ್ಚನೆಗಂ ಆಹಾರದಾನಕ್ಕಂ" ವೃತ್ತಿಯನ್ನು ಬಿಟ್ಟನು; ಎಂಬೀ ವಿಷಯಗಳು ತಿಳಿದುಬರುತ್ತವೆ. ಈ ಕಾರಣಗಳಿಂದ ಅಲಂಕಾರ ಗ್ರಂಥ ಕರ್ತೃವಾದ ಉದಯಾದಿತ್ಯನು ಇವನೇ ಆಗಿರಬಹುದೆಂದು ತೋರುತ್ತದೆ.[6]

---

[1] Madras Epigraphical collection for 1915, No. 546.
[2] *Lives of Kannada Poets*, Vol. I, pages 132–133.
[3] Madras Epigraphical collection for 1892, No. 338.
[4] ವೃ॥ ಮೇರುಮಹಾಮಹೀಧರದ ತೆಂಕಣ ಭಾರತವರ್ಷದೊಳ್ತನೋ
ಹಾರಿಯದೆಂಬನಸೊಳ್ಪ ಕುಂತಳದೇಶದ ಪೂರ್ವಭಾಗದೊಳ್ ।
ಸಾರಿ ಮೆರೆವ್ಪುದಂಧ್ರವರಣೀತಳಮಂದದಱಿಂದೆ ತೆಂಕಣಾ
ಧಾರಿಣಿಯಲ್ಲಿ ಪೆನ್ನಪರಿನಾಡು ನಿರಂತರ ಒಪ್ಪಿ ತೋಱುಗುಂ॥

[5] Tādpatri in the Bellary district.
[6] [ಆದರೆ ಚೋಳೋದಯಾದಿತ್ಯನೆಂದು ಶಾಸನದಲ್ಲೆಲ್ಲಿಯೂ ಇಲ್ಲ. ಈತನು ಕವಿಯೆಂಬುದೂ ಪ್ರಕಟಿತವಾಗಿಲ್ಲ. ಅಲ್ಲದೆ ಚೋಳವಂಶವು ಸೂರ್ಯವಂಶವೇ ಹೊರತು ಚಂದ್ರವಂಶವಲ್ಲ. ಶಾಸನದಲ್ಲಿ ಹೊಗಳಲ್ಪಟ್ಟ ಉದಯಾದಿತ್ಯನು "ಸೋಮಾನ್ವಯಜನಿತ"ನು. ಈತನ ತಾತ ಕಲಿಗಂಗನೆಂತಲೂ, ಗಂಗಾಪನಿರಿಱಲನೆಂತಲೂ ಕರೆಯಲ್ಪಟ್ಟಿರುತ್ತಾನೆ.—ಕೆ. ಕೃ.]

21899

ಚೋಳೋದಯಾದಿತ್ಯನು "ಸ್ವತಂತ್ರರಾಜನಾಗಿದ್ದಿರಲಾರನು; ಆವದೊರೆಯಲ್ಲಿಯೋ ಸಾಮಂತರಾಜನಾಗಿದ್ದಿರಬೇಕು" ಎಂಬುದು ಕವಿಚರಿತ್ರೆ ಕಾರರ [1]ಅಭಿಪ್ರಾಯ. "ಸ್ವಸ್ತ್ಯನೇಕಸಮರಸಂಘಟ್ಟಸಂಜಾತ ವಿಜಯಲಕ್ಷ್ಮೀಸಮಾಲಿಂಗಿತವಿಶಾಳವಕ್ಷಸ್ಥಳಂ ಕ್ಷತ್ರಿಯಪವಿತ್ರ ಭುವನತ್ರಿನೇತ್ರ ನಾಮಂಬರಾಭರಣಂ ಪಾಂಡ್ಯ ಗಜಕೇಸರಿ ಕುಲುಕಡೆಪುರವರಾಧೀಶ್ವರಂ ಅಷ್ಟಮಹಾಸಿದ್ಧಿ ಸಿದ್ಧವಟದೇವದಿವ್ಯಶ್ರೀಪಾದಪದ್ಮಾರಾಧಕ ಪರಬಳ ಸಾಧಕನಾಮಾದಿಸಮಸ್ತಪ್ರಶಸ್ತಿಸಹಿತಂ ಶ್ರೀಮನ್ಮಹಾಮಂಡಳೇಶ್ವರಂ ತ್ರೈಳೋಕ್ಯಮಲ್ಲ ಭುಜಬಳವೀರನಾರಾಯಣ ಪ್ರತಾಪಕುಮಾರನುದಯಾದಿತ್ಯ" ನೆಂಬ ಪ್ರಶಸ್ತಿಯನ್ನೂ "ಉದಯಾದಿತ್ಯದೇವ ಮಹಾರಾಜರು" ಎಂಬದಾಗಿ ಹೇಳಿರುವುದನ್ನೂ ಈತನ ತ್ರೈಲೋಕ್ಯಮಲ್ಲನೆಂಬ ಬಿರುದನ್ನೂ, ಈಶಾಸನದಲ್ಲಿ ತನ್ನ ಸಂರಾಜನಾವನ ಹೆಸರನ್ನೂ ಕೊಡದೆ ಇರುವುದನ್ನೂ ಗಮನಿಸಿದರೆ ಉದಯಾದಿತ್ಯನ ವಂಶೀಯರು ಮೊದಲುಮೊದಲು ಕಲ್ಯಾಣದ ಚಾಳುಕ್ಯರಿಗೆ ಸಾಮಂತರಾಗಿದ್ದರೆಂದೂ ಕಡೆಕಡೆಗೆ ಸ್ವತಂತ್ರರಾಗಿ ಪನ್ನ ಪರಿನಾಡನ್ನು ಆಳುತ್ತಿದ್ದರೆಂದೂ ವಿಶದವಾಗುತ್ತದೆ.

ಚೋಳರ ಪ್ರಾಬಲ್ಯವು ತಗ್ಗಿದಮೇಲೆ ಈ ವಂಶೀಯರನೇಕರು ಚಾಳುಕ್ಯರ ಅಧೀನರಾಗಿದ್ದರು. ಚಾಳುಕ್ಯರ ಬಲವು ಕುಂದುತ್ತ ಕುಂದುತ್ತ ಸಾಮಂತರನೇಕರು ಸ್ವತಂತ್ರರಾದರು. ಹಾಗೆ ಸ್ವತಂತ್ರರಾದವರಲ್ಲಿ "ಚೋಳೋದಯಾದಿತ್ಯನೂ" ಒಬ್ಬನಾಗಿರಬಹುದು.

ಈ ಶಾಸನದಿಂದ ಉದಯಾದಿತ್ಯನ ಅನ್ವಯಾದಿಗಳನ್ನು ತಿಳಿಸುವ ಕೆಲವು ಭಾಗಗಳನ್ನು ಉದ್ಧರಿಸುತ್ತೇನೆ—

ಉದಯಾದಿತ್ಯನ ಅನ್ವಯ

ವೃ॥ ಭುವನಪ್ರಖ್ಯಾತ ಸೋಮಾನ್ವಯಜನಿತ ಮಹಾರಾಜರುತ್ತುಂಗ ಕೀರ್ತಿ-
ರವಪೀಠಾಧ್ಯಾಸಿತರ್ಕ್ಕಳ್ಬಲಬರರಸುಗಳ್ಮುಂನೆ ಸಂದದ್ವರ್ಗಶಾಖಾ।
ವಿವರಾಂತರ್ವ್ವರ್ತ್ತಿಕೀರ್ತ್ತಿಧ್ವಜರವರೊಳುದಾತ್ತಪ್ರತಾಪಪ್ರಭಾವ
ಪ್ರವಿಧೂತಾನ್ಯಾವನೀಪಂ ನೆಗಳ್ದನವನಿಯಂ ಪಾಲಿಸಲ್ಕತ್ತಿರಾಜಂ॥

ವೃ॥ ಅತ್ತರಸಂಗೆಪುಟ್ಟಿದ ತನೂಭವ ನಾಹವಮಲ್ಲದೇವನಾ
ದಿತ್ಯಸಮಪ್ರತಾಪನಿಧಿ ತತ್ಸತಿ ಬಾಗಲದೇವಿ ತಾನರುಂ।
ಧ[ತ್ರ್ಯ]ಪಮಾನ ತತ್ಪ್ರಿಯಸುತಂ ಕಲಿಗಂಗ ಮಹೀಭುಜಂ ಪರಾ
ಧ್ಧತ್ಯವಿಭೇದಿ ತದ್ರಮಣಿ ತಾಂ ಮಹದೇವಿ ಯೆನಿಪ್ಪಳೊಪ್ಪುವಳ್॥

ವೃ॥ ಆಗಂಗಾವನಿಪಾಳಕಂಗವಿಸಕಂ ಪೆತ್ತಾ ಮಹಾದೇವಿಗಂ
ರಾಗಂ ಕೈಮಿಗೆ ಪುಟ್ಟಿದಂ ನೃಭುಸುತಂ ಶ್ರೀಸೋಮಿದೇವಂ ಜಯೋ।
ದ್ಯೋಗಂ ತಂನ್ರಿಪಕಾಂತೆ ಭೂಮಿಸುತೆಗಂ ಭೂಭೃತ್ತನೂಜಾತೆಗಂ
ಶ್ರೀಗಂ ಕಂಚಲದೇವಿ ತಾನೆ ಸಮನಾದಳು ಭಾಗ್ಯಸೌಭಾಗ್ಯದೊಳು॥

ಕಂ॥ ಒದವಿದ ರಾಜ್ಯಶ್ರೀಯಿಂ ದುದಾತ್ತನೆನಿಸಿರ್ದ್ದ ಸೋಮಿದೇವನೃಪಂಗಂ।
ಪದೆಪಿನ ಕಂಚಲದೇವಿಗಮುದಯಿಸಿದಂ ಪ್ರಿಯಕುಮಾರನುದಯಾದಿತ್ಯಂ॥

ಉದಯಾದಿತ್ಯನ ಪ್ರತಾಪ-

ವೃ॥ ಮದ[ವ*]ದ್ವೈರಿನೃಪಾಳಸೈನ್ಯತಿಮಿರಪ್ರಧ್ವಂಸನಂ ಗೆಯ್ದು ಪೇ
ರ್ಚ್ಚಿರ್ದ್ದಡೆ ರಾಗಂ ನಿಜಮಂಡಳಕ್ಕೆಸೆಯೆ ದಿಕ್ಚಕ್ರಾಕ್ರಾಂತಮಂ ತಂನ ತೇ।
ಜದಗುರ್ವ್ವಿಂ ಸಮುಪಾತ್ತವಭ್ಯುದಯಮಂ ಕೈಕೊಂಡ ಸ್ವೈಪಿಂದಮಿಂ
ತುದಯಾದಿತ್ಯಕುಮಾರನಪ್ರತಿಹತೋದಗ್ರಪ್ರತಾಪೋದಯಂ॥

ಕಂ॥ ಪ್ರತ್ಯರ್ತ್ಥಿನೃಪತಿಬಳತಿಮಿರಾತ್ಯಯಮಂ [ಮಾ]ಳ್ಪ ತೇಜದಿಂ ಸೋಮನೃಪಾ।
ಪತ್ಯನೆನಿಸಿದ ಕುಮಾರಂ ಪ್ರತ್ಯಕ್ಷಂ ತಾನೆ ನೋಳ್ಪಡುದಯಾದಿತ್ಯಂ॥

ವೃ॥ ಸ್ಮರನಂ ರೂಪಿನೊಳಿಂದ್ರನಂ ವಿಭವದೊಳು ಕಾನೀನನಂ ದಾನದೊಳು
ಹರಿಯಂ ವಿಕ್ರಮಶಕ್ತಿಯೊಳು ಯಮಜನಂ ಸತ್ಯೋಕ್ತಿಯೊಳ್ ತೀವ್ರಭಾ।
ಸ್ಕರನಂ ತೇಜದೊಳಂಬುಜಪ್ರಭವನಂ ಚಾತುರ್ಯದೊಳು ಹೇಮಭೂ
ಧರಮಂ ಧೈರ್ಯದೊಳಿಯ್ದೆ ಪೋಲ್ವನುದಯಾದಿತ್ಯೋರ್ವ್ವರಾವಲ್ಲಭ॥

ಕಂ॥ ಉದಯಾದಿತ್ಯಕುಮಾರಂ ಕದನದೊಳಿದಿರಾದ ನುಪನದಹಿತಮಹೀಭೃ।
ತ್ಪುದತಿಯರ ವದನವನಜಕ್ಕದನಕಲಂ ಮಾಡುವಂದವಿದು ಬಸವಂದ॥

[1] *Lives of Kannada Poets*, Vol. I, page 133.

## ಲಕ್ಷ್ಮೀಧರ ಮತ್ತು ಮಧುರ ; ಕ್ರಿ. ಶ. ೧೪೧೦.

ಕಮಲಾಪುರಕ್ಕೂ ಹಂಪೆಗೂ ಮಧ್ಯಮಾರ್ಗದಲ್ಲಿರುವ ಕೃಷ್ಣದೇವರ ಗುಡಿಯ ಸಮೀಪದ ಒಂದು ಮಂಟಪದಲ್ಲಿ [1]ಶಿಲಾಶಾಸನವೊಂದುಂಟು. ಇದರಿಂದ ದೇವರಾಯನ ಸಚಿವನಾಗಿದ್ದ [2]ಲಕ್ಷ್ಮೀಧರನು ಪಂಪಾಕ್ಷೇತ್ರದ ಪೂರ್ವದಿಗ್ಭಾಗದಲ್ಲಿರುವ ಮಾಲ್ಯವತ್ಪರ್ವತದ ತಂಕಣದೆಸೆಯ ಗುಹೆಯೊಂದರಲ್ಲಿ ಶಕ ೧೩೩೧ ನೆಯ ವಿರೋಧಿ ಸಂವತ್ಸರದ ಫಾಲ್ಗುಣ ಪ್ರಥಮವಾಸರ ಗುರುವಾರದಂದು "ಸಮಸ್ತೋತ್ಸವ ಮುಣ್ಮೆ ಪೂಣ್ಮೆರೆ ಮಹಾಗಣನಾಥನ ಪ್ರತಿಷ್ಠೆಯಂ" ಮಾಡಿದನೆಂಬದಾಗಿ ತಿಳಿಯಬರುತ್ತದೆ.

"ಕವೀಂದ್ರಾಭರಣಮಧುರ" ನು "ಪಿಂಗದೆ ಲಕ್ಷ್ಮೀಧರಶಚಿವಂಗಾಚಂದ್ರಾರ್ಕ್ಕಮೊದವಿದಾಯುಂ ಶ್ರೀಯುಂ, ಸಂಗತಿವಡೆದಿರೆ ಬರೆದಂ ಮಂಗಳಮಂ . . . . . " ಎಂದು ಶಾಸನಾಂತ್ಯದಲ್ಲಿದೆ. ಶಾಸನಕೃತಿಪತಿಯಾದ ಲಕ್ಷ್ಮೀಧರ, ಕೃತಿಕರ್ತನಾದ ಮಧುರ ಇವರ ವಿಚಾರವನ್ನು ಚರ್ಚಿಸುವುದೇ ನಮ್ಮ ಪ್ರಕೃತಕರ್ತವ್ಯವು.

ಕವಿಚರಿತ್ರೆಯಲ್ಲಿ[3], ಒಬ್ಬ ಮಧುರನು ಧರ್ಮ್ಮನಾಥಪುರಾಣ, ಗುಮ್ಮಟಾಷ್ಟಕ ಇತ್ಯಾದಿ ಗ್ರಂಥಗಳನ್ನು ಬರೆದಿರುವಂತೆ ಕವಿಚರಿತ್ರೆಕಾರರು ಬರೆದಿದ್ದಾರೆ. "ಇವನು ಜೈನಮತದವನು ; ವಾಜಿವಂಶಕ್ಕೆ ಸೇರಿದವನು , ಭಾರದ್ವಾಜಗೋತ್ರದವನು ; ಇವನ ತಂದೆ ವಿಷ್ಣು ; ತಾಯಿ ನಾಗಾಂಬಿಕೆ ; ಬುಕ್ಕರಾಯನ ಸುತ ಹರಿಹರರಾಯನ ಪ್ರಧಾನನಾದ ಮುದ್ದದಂಡೇಶ್ವರನು ಇವನ ಪೋಷಕನು ; 'ಭೂನಾಥಾಸ್ಥಾನಚೂಡಾಮಣಿ ಮಧುರಕವೀಂದ್ರಂ' ಎಂಬುದರಿಂದ ಇವನು ಹರಿಹರನ ಆಸ್ಥಾನಕವಿಯಾಗಿದ್ದಿರಬೇಕು. ಈತನಿಗೆ ಕಲಾವಿಲಾಸ, ಕವಿರಾಜಕಲಾವಿಲಾಸ, ಕವಿಮಾಧವ, ಮಧುರ, ಮಾಧವ, ಸರಸಕವಿರಸಾಲವಸಂತ ಭಾರತೀಮಾನಸಕೇಳೀರಾಜಹಂಸ, ವಿಶ್ವವಿದ್ಯಾಸಮುದಯ, ಸುಮನಸ್ಸಂಚರಚಂಚರೀಕ ಎಂಬ ಬಿರುದುಗಳಿದ್ದಂತೆಯೂ" ಕವಿಚರಿತ್ರೆಯಿಂದಲೇ ಸ್ಪಷ್ಟವಾಗುತ್ತೆ.

ಈ ಶಾಸನದಿಂದ 'ಕವೀಂದ್ರಾಭರಣ ಮಧುರ' ನಿಗೆ ದೇವರಾಯನ ಮಹಾಪ್ರಧಾನ ಲಕ್ಷ್ಮೀಧರನು 'ಸುಕ್ಷೇತ್ರ ಹಸ್ತ್ಯಶ್ವಭೂಷಾದಿಗಳಂ' ಕೊಟ್ಟು ಅವನನ್ನು ಬಹು ಅಕ್ಕರೆಯಿಂದ ಪೋಷಿಸುತ್ತಿದ್ದನೆಂದು ತಿಳಿಯಬರುತ್ತದೆ.

ಹರಿಹರರಾಯನ ಪ್ರಧಾನ ಮುದ್ದದಂಡೇಶನಿಂದ ಪೋಷಿತನಾದ ಕವಿಚರಿತ್ರೆಯ ಮಧುರನಿಗೂ, ದೇವರಾಯನ ಪ್ರಧಾನನಾದ ಲಕ್ಷ್ಮೀಧರನಿಂದ ಪೋಷಿತನಾದ ಈ ಶಾಸನದ ಮಧುರನಿಗೂ ಏನು ಸಂಬಂಧವುಂಟೆಂದು ವಾಚಕರು ಕೇಳಬಹುದು. ಈ ಶಾಸನಾಂತ್ಯದಲ್ಲಿ ಮಧುರನು ತನ್ನನ್ನು ಕುರಿತು ಹೀಗೆ ಬರೆದುಕೊಂಡಿರುವನು :—

ವೃ ॥ ಗಣಿದಂಗೊಳ್ವೆಡೆ ಮಿಕ್ಕನಕ್ಕರದಮಾತಂತಿರ್ಕ್ಕೆ ತನ್ನಾಣೆ ಘೋ
ಸಣೆ ಸಲ್ಗುಂ ಸುಕವೀಂದ್ರವೃಂದಸಭೆಯೊಳ್ತಾನೆಂದೊಡಂನಂಮ ಧಾ ।
ರಿಣಿಯೊಳ್ಕೇಳ್ದಱಿಯಾರ್ಜಡಾ ಮಧುರನಂ ನಿರ್ನ್ನೀತಕರ್ನ್ನಾಟಲ
ಕ್ಷ್ಮಣಪಾದಸರೋಜನಂ ಪ್ರವಿಲಸದ್ಧಾತ್ರೀಮುಖಾಂಭೋಜನಂ ॥

ಕವಿಚರಿತ್ರೆಯ ಮಧುರನು ತನ್ನ ಕವಿತಾಚಾತುರಿಯನ್ನೂ ಗುಣಾದಿಗಳನ್ನೂ ಹೇಳಿಕೊಳ್ಳುತ್ತಾ ಹೀಗೆ ಬರದಿರುವನು :—

ವೃ ॥ ಗಣಿದಂಗೊಳ್ವೆಡೆ ಮಿಕ್ಕನಕ್ಕರದ ಮಾತಂತಿರ್ಕ್ಕೆ ತನ್ನಾಣೆ ಗೋ
ಸಣೆ ಸಲ್ಗುಂ ಸುಕವೀಂದ್ರವೃಂದಸಭೆಯೋಳ್ ತಾನೆಂದೊಡಮ್ಮಮ್ಮ ಧಾ ।
ರಿಣಿಯೋಳ್ ಕೇಳ್ದಱಿಯಾ ಜಡಾ ಮಧುರನಂ ನಿರ್ಣೀತಕರ್ಣಾಟಲ
ಕ್ಷಣಭಾಷಾಕವಿರಾಜನಂ ಪ್ರವಿಲಸದ್ವಾಣೀಮುಖಾಂಭೋಜನಂ ॥

ಈ ವೃತ್ತವನ್ನು ಕವಿಚರಿತ್ರೆಕಾರರು ಉದಹರಿಸಿರುವರು. ಪಾಠಕರು ಈ ಎರಡು ವೃತ್ತಗಳನ್ನೂ ಕೊಂಚ ಪರೀಕ್ಷಿಸಿದ್ದೇ ಆದರೆ ಎರಡೂ ಒಂದೇ ಎಂಬುದಾಗಿ ಹೇಳದಿರರು. ವೃತ್ತಗಳ ನಾಲ್ಕನೇಪಾದ ಹೊರತು ಮಿಕ್ಕವುಗಳು ಎರಡರಲ್ಲೂ ಒಂದೇ. ನಾಲ್ಕನೆಯ ಪಾದವು ಕವಿಚರಿತ್ರೆಯಪ್ರಕಾರ :

" . . . . . . ನಿರ್ಣೀತಕರ್ಣಾಟಲ
ಕ್ಷಣಭಾಷಾಕವಿರಾಜನಂ ಪ್ರವಿಲಸದ್ವಾಣೀಮುಖಾಂಭೋಜನಂ " ॥ ಎಂಬುದು.

ಶಾಸನಪಾಠದಪ್ರಕಾರ :

" . . . . . . ನಿರ್ನ್ನೀತಕರ್ನ್ನಾಟಲ-

---

[1] Madras Epigraphical collection for 1889, No. 38.
[2] ಈ ಲಕ್ಷ್ಮೀಧರನು ತನ್ನ ತಾಯಿಯ ಕಡೆ ಅದ್ವೈತಾಚಾರ್ಯನಾದ ಮಾಧವಾಚಾರ್ಯನಿಗೆ ಬಂಧುವಾಗಿದ್ದನು.
[3] Vol. I, page, 346
[4] *Ibid.*, page, 347.

[1] ಕ್ಷ್ಮಣಪಾದಸರೋಜನಂ ಪ್ರವಿಲಸದ್ಧಾತ್ರೀಮುಖಾಂಭೋಜನಂ ॥"

ಆಗಿರುತ್ತದೆ.

ಮೊದಲನೇಪಾಠದಲ್ಲಿ ಮಧುರನು ತನ್ನ ಕವಿತಾಚಾತುರ್ಯ್ಯವನ್ನು ಹೇಳುತ್ತಾ 'ಕರ್ಣಾಟಲಕ್ಷಣಭಾಷಾಕವಿರಾಜನಂ ಪ್ರವಿಲಸದ್ವಾಣೀಮುಖಾಂಭೋಜನಂ' ಎಂಬದಾಗಿ ಹೇಳಿಕೊಂಡಿರುವನು. ಎರಡನೆಯ ಪಾಠದಲ್ಲಿ ಅದೇ ರೀತಿ ತನ್ನ ಗುಣಾದಿಗಳನ್ನು ಕವಿತಾಚಾತುರ್ಯವನ್ನು ಹೇಳಿ ತನ್ನ ಪೋಷಕನು ಪ್ರಧಾನ ಲಕ್ಷ್ಮೀಧರನಾಗಿದ್ದುದರಿಂದ 'ಲಕ್ಷ್ಮಣಪಾದಸರೋಜನಂ ಪ್ರವಿಲಸದ್ಧಾತ್ರೀಮುಖಾಂಭೋಜನಂ' ಎಂಬದಾಗಿ ಹೇಳಿರುವನು. ಆದುದರಿಂದ 'ಕರ್ಣಾಟಲಕ್ಷಣಭಾಷಾಕವಿರಾಜನೂ' 'ನಿಸ್ಸೀತಕರ್ನಾಟಲಕ್ಷ್ಮಣಪಾದಸರೋಜನೂ' ಇಬ್ಬರೂ ಒಂದೇ. ಮಧುರನು ಮುದ್ದದಂಡೇಶನ ಪೋಷಣೆಗೆ ಸೇರಿದ್ದುದುಮಾತ್ರವೇ ಅಲ್ಲದೆ ಲಕ್ಷ್ಮೀಧರನ ಉದಾರಾಶ್ರಯಕ್ಕೂ ಪಾತ್ರನಾಗಿದ್ದನೆಂಬಂಶವು ಸ್ಪಷ್ಟವಾಯಿತು. 'ಭೂನಾಥಾಸ್ಥಾನಚೂಡಾಮಣಿ ಮಧುರಕವೀಂದ್ರಂ' ಎಂಬದಾಗಿ ಹೇಳಿಕೊಂಡಿರುವುದರಿಂದಲೂ, ಈ ಶಾಸನದಲ್ಲಿ ದೇವರಾಯನ ವಂಶಾವಳಿಯನ್ನು ಹೇಳುತ್ತಾ:

ವೃ ॥ ಆ ಭೂಮೀಪಾಲಪುಣ್ಯಾಂಕುರಮೆದು ಪುರುಷಾಕಾರದಿಂ ಪುಟ್ಟಿದಂತಾ
ಶಾಭಾಗಪ್ರಸ್ಫುರತ್ಪಾವನಯಶನಕನಿಪ್ರೌಢಬಾಹುಪ್ರತಾಪಂ ।
ಸೌಭಾಗ್ಯಶ್ರೀನಿವಾಸಂ ಜನಿಯಿಸಿ ಸಕಲಕ್ಷತ್ರಚೂಡಾಧಿರೂಢಾ
ಜ್ಞಾಭಾರಂ ಸಾರ್ವ್ವಭೌಮೋನ್ನತಿಯೊಳೆಸೆಗಿದಂ ದೇವರಾಜಾವನೀಂದ್ರಂ ॥

ವೃ ॥ ಸಲಿನಾನಾಸಸ್ಯಸಂಪತ್ತಿಯನೊದವಿಸಿ ಸಂತುಷ್ಟಿಯಿಂ ದಾನಧಾರಾ
ಜಲದಿಂ ಸಂತಾಪಮಂ ತಳ್ಗಿಸಿ ವಿತತಸಿತಚ್ಛತ್ರಸುಚ್ಛಾಯೆಗೊಯ್ದು ॥
ಜ್ವಲಿಪಾಜ್ಞಾದಾಮದಿಂದಂ ನಿಯಮಿಸಿ ನಿಜದೋಸ್ತಂಭದೊಳ್ಕಟ್ಟಿ ಗೋಮಂ
ಡಲಮಂ ಸತ್ಕೀರ್ತ್ತಿದುಗ್ಧಂ ಗಱೆದನಱಕೆಯಿಂ ದೇವರಾಜಾವನೀಂದ್ರಂ ॥

ಎಂದನೇಕವಿಧವಾಗಿ ಸ್ತೋತ್ರಮಾಡಿರುವುದರಿಂದಲೂ, ಮಧುರನು ದೇವರಾಯನ ಆಸ್ಥಾನಕವಿಯಾಗಿಯೂ ಇದ್ದನೆಂದೇ ಹೇಳಬಹುದು. [2] ಈ ಕವಿಯ 'ಸಮಾಸಪ್ರಸನ್ನ ಸದೇಶೀಸರಣಿ ಶಬ್ದಾರ್ಥಗ್ರಸಮಾಚಾತುರ್ಯ ಮಾಧುರ್ಯ'ದ ವಿಚಾರವಾಗಿ ನಾವಿಲ್ಲಿ ಹೇಳಲು ಪ್ರಯತ್ನಿಸುವುದು ಅನುಚಿತ.

ಮಧುರನ ಗ್ರಂಥಗಳು ನಮಗೆ ಹೆಚ್ಚಾಗಿದೊರೆತಿಲ್ಲ. ಈಶಾಸನವೇ ಒಂದು ಪುಟ್ಟ ಕೃತಿಯಂತಿದೆ. ಇದರಲ್ಲಿ ಕಾವ್ಯಲಕ್ಷಣಗಳೆಲ್ಲವೂ ಉಂಟು. ಲಕ್ಷ್ಮೀಧರನ ವಿಚಾರವನ್ನು ವಿಶದೀಕರಿಸುವಾಗ ಅಲ್ಲಲ್ಲಿ ಶಾಸನಭಾಗಗಳನ್ನೇ ಉದಹರಿಸುವೆನು. ಆಗ ಪಾಠಕರೇ "ಕವಿಮಧುರನ ಮಾತುಗಳೆಲ್ಲಂ ಸವಿಯೋ" ಎಂದು ಹೇಳದಿರರು.

ಲಕ್ಷ್ಮೀಧರನು ದೇವರಾಯನ ಮಹಾಪ್ರಧಾನನಾಗಿದ್ದನೆಂಬುದನ್ನು ಮೊದಲೇ ತಿಳಿಸಿದ್ದಾಯಿತು. ಮಧುರನು ಇವನನ್ನು "ಸತ್ಯವೀಂದ್ರ" "ಕವಿತಾಕಲ್ಪವಲ್ಲೀವಿತಾನ" "ಕವಿರಾಜಲಕ್ಷ್ಮಣ" "ಕವಿತಾಲಕ್ಷ್ಮೀಧರ" ಎಂದು ಅನೇಕಬಗೆಯಾಗಿ ಸಂಬೋಧಿಸಿ ಸ್ತೋತ್ರಮಾಡಿರುವುದರಿಂದ ಲಕ್ಷ್ಮೀಧರನು ವಿದ್ಯಾಪಕ್ಷಪಾತಿಯಾಗಿದ್ದು ಅನೇಕ ವಿಬುಧರಿಗೆ ಆಶ್ರಯಭೂತನಾಗಿದ್ದುದು ಮಾತ್ರವೇ ಅಲ್ಲದೆ ತಾನೇ ಒಬ್ಬ ಮಹಾಕವಿಯಾಗಿದ್ದಿರಬೇಕು. ಇದಕ್ಕೆ ಸಂದೇಹವೇ ಇಲ್ಲ. ಆದರೆ ಇವನು ಯಾವ ಗ್ರಂಥಗಳನ್ನು ಬರೆದಿರುವನೋ ನಮಗೆ ಗೊತ್ತಿಲ್ಲ. ಕೆಳಗೆ ಉದಹರಿಸಲ್ಪಡುವ ಶಾಸನದಲ್ಲಿ ಕಂಡ 'ಸಾರಶ್ರೀನೀತಿವಾಕ್ಯಾಮೃತಪರಿಸರದೊಳ್ಪುಟ್ಟಿ' ಎಂಬ ವೃತ್ತದಲ್ಲಿ ಸೂಚಿತವಾಗಿರುವ 'ನೀತಿವಾಕ್ಯಾಮೃತ' 'ಆನಂದರಾಮಾಯಣ' 'ಕೃಷ್ಣಲೀಲಾ' ಮೊದಲಾದುವು ಲಕ್ಷ್ಮೀಧರಕೃತಗ್ರಂಥಗಳೆಂದು ಊಹಿಸಲು ಅವಕಾಶವುಂಟು.

ವಿಜಯನಗರದ ಅರಸರ ಬಳಿಯಲ್ಲಿ ಮಾದರಸಸಾಯಣರೆಂಬ ಪ್ರಧಾನರು ಇಬ್ಬರಿದ್ದರು. ಇವರೇ ಪ್ರಸಿದ್ಧರಾದ ವೇದಭಾಷ್ಯಾದಿಬೃಹದ್ಗ್ರಂಥಪ್ರವರ್ತ್ತಕರಾಗಿ ಹೆಸರುವಡೆದ ಸಾಯಣಮಾಧವರೆಂಬುವರು. ಇವರಿಗೆ ಸಿಂಗಲೆ ಎಂಬೊಬ್ಬ ತಂಗಿಯಿದ್ದಳು.

ವೃ॥ ಆತರುಣೀಶಿಖಾಮಣಿಗೆ ವಲ್ಲಭನಾರೆನೆ ವಿಷ್ಣುವೃದ್ಧವಿ
ಖ್ಯಾತಪವಿತ್ರಗೋತ್ರದೊಳು ಗೋಸನೆ ಪೆತ್ತಗೆದಂ ಜಗಜ್ಜನ ।
ಪ್ರೀತಿಕರಂ ಗುಣಾಕರನಲಂಕೃತಭೂಭುವನಂ ಬುಧಾಳಿಲೀ
ಲಾತಿಶಯೈಕತಾಮರಸನೆಂದೆನೆ ರಾಮರಸಂ ಧರಿತ್ರಿಯೊಳು ॥

---

[1] [ಇಲ್ಲಿ 'ಕ್ಷ್ಮಣಪಾದಸರೋಜನಂ' ಎಂಬುದು ಛಂದಸ್ಸಿಗೆ ವಿರುದ್ಧವಾಗಿದೆ. ತಿದ್ದುವಲ್ಲಿ 'ಕ್ಷ್ಮಣಪಾದೈಕಸರೋಜನಂ' ಎಂದು ತಿದ್ದಬೇಕಾದೀತು.—ಹೊ. ಕೃ.]

[2] *Lives of Kannada Poets*, Vol. I, pages, 346-351 and Vol. II, page, 204.

ಈ ರಾಮರಸನಿಗೆ :

ವೃ॥ ಅನಿಮಿಷನಂದನಕ್ಕಮರಭೂರುಹಪಂಚಕಮೀಶ್ವರಂಗೆ ನೆ
ಟ್ಟನೆ ಮುಖಪಂಚಕಂ ನೃಪನಯಾಭಿಮತಕ್ಕಮರ್ದ್ಧಂಗಪಂಚಕಂ ।
ಜನಿಯಿಸಿ ಲೋಕರೂಢಿ ವಡೆದಂತೆ ಸಮಸ್ತಜನಂ ಮನಂಗೊಳ
ಲ್ಜನಿಸಿದುದಾ ಗುಣೈಕನಿಧಿ ರಾಮರಸಂಗೆ ತನೂಜಪಂಚಕಂ ॥

ಕಂ॥ ಕ್ರಮದಿಂ ಲಕ್ಷ್ಮೀಧರ ಚೆನ್ನಮಂತ್ರಿ ಬುಕ್ಕಂಣ ಮಾಧವಂ ಪೆರ್ಗ್ಗಡೆಯಂ ।
ದಮರ್ದ್ದಿರೆ ನಾಮಂ ನೆಗಳ್ದರ್ ಸಮನಿಸಿ ಸಿಂಗಾಂಬಿಕಾಪವಿತ್ರೋದರದೊಳು ॥

ಕಂ॥ ಆ ಪೆಱೆವ್ರೈವರೊಳಾಂತಂ ಶ್ರೀಮದ್ಭೀಮಪ್ರತಾಪನರ್ಜ್ಜನಕೀರ್ತ್ತಿ ।
ಪ್ರೇಮಂ ಲಕ್ಷ್ಮೀಧರನೆನ[ಲೀ] ಮಹಿಯೊಳ್ಧರ್ಮ್ಮಸಂಭವವಿಭ್ರಾಭವಮಂ ॥

ಕಂ॥ ಕಂನಡಿಗಕುಲಕೆ ರಂನದ ಕಂನಡಿಯೆನೆ ವಿಶ್ವವಿದಿತವೃತ್ತಶ್ರೀಸಂ ।
ಪಂನಂ ಲಕ್ಷ್ಮೀಧರದೇವಂ ನಿರ್ಮ್ಮಲನಾಗಿ ನೆಗಳ್ದನೊಳಗಂ ಪೊಱಗಂ ॥

ವೃ॥ ಶ್ರೀರಾಮಂ ತಂದೆ ದೇವೋತ್ತಮ ದಶರಥರಾಮಂ ಮನೋದೈವಮಾನಂ
ದಾರಾಮಂ ರೂಢಿವೆತ್ತಗ್ಗದ ಕುಲಗುರುವೆಂದಂತೆ ಪೋಷಿಪ್ಪದೇನಿಂ ।
ನಾರಿಂ ಸಿಂಗಾಂಬಿಕಾಮಂಗಳಜಠರಸುಧಾವಾರ್ದ್ಧಿಸಂಜಾತನಂ ತಾ
ನಾರಾಮಂ ಲಕ್ಷ್ಮಣಾಮಾತ್ಯನೆ ಸಕಲಜಗಜ್ಜಾತಚೇತೋಭಿರಾಮಂ ॥

ಸಿಂಗಾಂಬಿಕೆಯು ತನ್ನ ಮಗುವಿಗೆ ಹೇಗೆ ಹಾಲೆಱೆಯುತ್ತಿದ್ದಳೆಂಬುದನ್ನು ಮಧುರನಿಂದ ಕೇಳಿ:

ವೃ॥ ಕೆಱೆಯಂ ಕಟ್ಟಿಸು ಭಾವಿಯಂ ಸವೆಸು ದೇವಾಗಾರಮಂ ಮಾಡಿಸೆ
ಜ್ಜೆಱೆಯೊಳ್ಸಿಲ್ಕಿದನಾಥರಂ ಬಿಡಿಸು ಮಿತ್ರರ್ಗ್ಗಿಂಬುಕೆಯಿ ನಂಬಿದ ।
ರ್ಗ್ಗೆಱೆವಿಟ್ಟಾಗಿರು ಶಿಷ್ಟರಂ ಪೊರೆ ಯೆನುತ್ತಿಂತೆಲ್ಲಮಂ ಪಿಂದೆ ತಾಂ
ಯೆಱೆದಳ್ಪಾಲೆಱೆವಂದು ತೊಟ್ಟು ಕಿವಿಯೊಳ್ ಲಕ್ಷ್ಮೀಧರಾಮಾತ್ಯನ ॥

ಲಕ್ಷ್ಮೀಧರನಿಗೆ ದೇವಕಿ, ಸೋಮಲೆ ಎಂಬಿಬ್ಬರು ಹೆಂಡಿರಿದ್ದರು. ಗಂಡು ಮಕ್ಕಳು ನಾಲ್ಕುಮಂದಿ. ಈ ಲಕ್ಷ್ಮೀಧರನ ಕೀರ್ತಿಯನ್ನು ವರ್ಣಿಸುತ್ತಾ ಕವಿಯು ಹೀಗೆ ಹೇಳಿಯಿದ್ದಾನೆ:

ಕಂ॥ ಕಯ್ಯೆಂದೊಡೆ ಮಂದಾರದ ಕಯ್ಯುಂ ಮಂತ್ರೀಂದ್ರ ಲಕ್ಷ್ಮಣಾಂಕನ ಕಯ್ಯುಂ ।
ಕಯ್ಯೆಲ್ಲದುಳಿದ ಮನುಜರ ಕಯ್ಯೆಂಬುವು ಮರುಳಕೈಗಳೇತಱ ಕೈಗಳ್ ॥

ಕಂ॥ ಮಾತೇನೊ ದೇವರಾಯಂಗಾತಂ ಸನ್ಮಂತ್ರಿಯೆನಿಸಿ ನೆಗಳ್ವರೆ ವಿಬುಧ ।
ಪ್ರೀತಿ ಮಿಗೆ ನಿಖಿಳವಿದ್ಯಾನೀತಿಗೆ ಗುರುವೆಂನದಿರ್ಪರೇ ಲಕ್ಷ್ಮಣನಂ ॥

ವೃ॥ ಸುಮನೋವಿನ್ಯಾಸದಿಂ ವಿಶ್ರುತವಿಬುಧಜನಾನೂನಸನ್ಮಾನದಾನ
ಕ್ರಮದಿಂದೀ ರಾಮಚಂದ್ರಾತ್ಮಜ ಸಚಿವಶಿರೋರತ್ನ ಲಕ್ಷ್ಮೀಧರಂಗಾ ।
ಸರ್ಮಱೊಂದಾನಳ್ಕಱಿಂ ಕೇಳ್ದೊಡೆ ಬಿಡು ಪೊಸತೇಂ ಪೋಗಿಯುಂ ಬಂದು ಕಲ್ಪ
ದ್ರುಮಮೊಂದಂ ಪೇಳ್ವೆ ಮತ್ತುಳ್ಳಡೆ ನುಡಿ ಜಗತೀಚಕದೊಳ್ ಸತ್ಕವೀಂದ್ರಾ ॥

ವೃ॥ ಪುಸಿದಾನರ್ಜ್ಜಿಸುವರ್ತ್ಥಮಿಂ ಮುನಿದಕಯ್ಯೊಳ್ಪೇಳಲೇ ವಂದಿ ವಾ
ದಿಸದಿರ್ಪಂಕವಿಶುದ್ಧಿಯೊಳ್ವೈಭವದೊಳ್ವಿಖ್ಯಾತಿಯೊಳ್ನೀತಿಯೊಳ್ ।
ಳ್ಜಸದೊಳ್ಸೌಜನ್ಯದೊಳತ್ಯುದಾರಗುಣದೊಳ್ಗಾಂಭೀರ್ಯದೊಳ್ಕೃತ್ರ್ತ ಲ
ಕ್ಷಿಸೆ ಲಕ್ಷ್ಮೀಧರನಲ್ಲದುಂಟೆ ಸಭೆಯೊಳ್ ಶ್ರೀದೇವರಾಜೇಂದ್ರನಾ ॥

ವೃ॥ ಧರಣೀಚಕ್ರಂ ಮನಂಗೊಳ್ವುದೆಯುಮುರುತಮಸ್ತೋಮವಲ್ಲಾಡುವಾತ್ಮಾ
ಚರಣಂ ಸನ್ಮಾರ್ಗ್ಗಮುದ್ಯೋತಿಸುವ ರುಚಿಸದಾಲೋಕಮುರ್ವ್ವೀಗೆಲ್ಲ ತೇಜ ।
ಸ್ಫುರಣಂ ನಿತ್ಯಾನುರಾಗಕ್ಕೆಡೆಗುಡಲೆಸೆವೀ ಪೇರ್ಮ್ಮೆಯಿಂ ದೇವಭೂಭೃ
ದ್ವರಪಾದಾಸಂನ ನೇನುಂನತಿವಡೆದನೊ ಲಕ್ಷ್ಮೀಧರಾಮಾತ್ಯಮಿತ್ರಂ ॥

ವೃ॥ ಪೂವಿನ ಬಿಲ್ಲನೇಱಿಸುವ ಬಂಡೆ ಬಸಂತನನಾಸೆಮಾಡುಪಿಂ
ಮಾವಿನರಲ್ಗಳಂ ಬನಸಗೆಯ್ವಳದಿಂಗಳ ಪಂಗುಗೊಳ್ವ ಬ।
ಲ್ಪೇವುದೆನುತ್ತ ಚಿತ್ತಭವನಾವನ ಮೆಯ್ವಳಗೊಂಡು ಕಂಡ ಕಾಂ
ತಾವಳಿಯಂ ಮರಳ್ಚಿ ವನೆನಲ್ಪೊಬಗೆಂತುಟೊ ಲಕ್ಷ್ಮಣಾಂಕನಾ॥

ಕಂ॥ ನೆಲದೊಳ್ಪ್ರತಿಹಿಂತರಾಮೆಂದುಲಿವರ ನಾಲಿಗೆಯನಲುಗಲಿಯ್ಯದ ಬಲು ಸಂ।
ಕಲೆಯಾಡುದು ಮುಂಕೀರ್ತಿಯ ಕಲೆ ಮೊಜಗವಱಿಯ ಮಂತ್ರಿಲಕ್ಷ್ಮೀಧರನಾ॥

ವೃ॥ ಗಣನಾಮಾತ್ರಮೆ ದೇವರಾಯನರನಾಥಾಸ್ಥಾನದೊಳ್ಮಾನವಾ
ಗ್ರಣಿಗಳ್ಸ್ವೃತಿ ವಿಚಾರಿಪಾಗಳಾಪಧಾಸಂಶುದ್ಧಿಯಿಂ ಬುದ್ಧಿಯಿಂ।
ಗುಣದಿಂ ಗೌರವದಿಂ [ಪೊ]ದಳ್ದಸವ ಮುದ್ರಾಮಾತ್ಯಯೌಗಂಧರಾ
ಯಣಚಾಣಾಕ್ಯಸುಮಂತ್ರರೋಳ್ದೊರೆಗೆ ವಂದಂ ಮಂತ್ರಿಲಕ್ಷ್ಮೀಧರಂ॥

ವೃ॥ ಸಾರಶ್ರೀನೀತಿವಾಕ್ಯಾಮೃತಪರಿಸರದೊಳ್ಪುಟ್ಟಿ ಮೆಯ್ಗುಂದದಾನಂ
ದಾರಾಮಾಸಂನರಾಮಾಯಣದೊಳಮರ್ದ ತಳ್ತಾವಗಂ ಕೃಷ್ಣಲೀಲಾ।
ಧಾರಂ ತಾನಾಗಿ ನಾನಾಫಲಮನಿಳಗೆ ಬೀಱಿತ್ತು ಸಂಸಾರಸಾಖ್ಯಾ
ಕಾರಂ ಸನ್ಮಂತ್ರಿ ಲಕ್ಷ್ಮೀಧರನುರುಕವಿತಾಕಲ್ಪವಲ್ಲೀವಿತಾನಂ॥

ವೃ॥ ಪದಮಂಡಂ ಕವಿರಾಜಲಕ್ಷ್ಮಣನ ಕಾವ್ಯಾಲಾಪಮಂ ಕೂರ್ತು ಕೇ
ಳದೆ ಮುಂಪೋದರೆ ಪಾದ ಪೂ[ಂ]ಮೆ ಕಿವಿಗೊಟ್ಟಿತ್ತಾನುಮಾರೈದು ಸಂ।
ಮದದಿಂ ಸೈತಿರದೋರು ದೂತಿಯರಮಾತಂ ವಿಾಱೆ ಕಣ್ಗೊಂಡು ನೋ
ಡಿದ ಪೆಣ್ಗಳ್ಪುದಿದಿದ್ದ ಪೂಗಣೆಯ ಪುಂಕೆಂದಂಣೆ ಪುಯ್ಯಲ್ಲರೇ॥

ವೃ॥ ಗುರುದೈವಂ ಮೆಚ್ಚೆ ನಿಚ್ಚಂ ಬಗೆದಣಿವ ಮನೋಭಕ್ತಿ ವಿದ್ವಜ್ಜನಂ ಬಾ
ಪುರೆ ಬಾಪೆಂದೆತ್ತಿ ಕೊಂಡಾಡುವ ವಿವಿಧಕಳಾಪ್ರೌಢಿ ವಂದಿವ್ರಜಂ ಕಂ।
ಡಿರದಿಷ್ಟಾರ್ಥಂಗಳಂ ಕೊಂಡಡರೆ ಪೊಗಳ್ವ ವಿಶ್ರಾಣನಂ ವಿಶ್ವ[ವಂದ್ಯಂ]
ಚರಿತಂ ತಾನಾಗಲೇನುನ್ನತಿವಡೆದನೊ ಲಕ್ಷ್ಮೀಧರಾಮಾತ್ಯವರ್ಯ್ಯಂ॥

ಲಕ್ಷ್ಮೀಧರನ ಸ್ವಾಮಿಕಾರ್ಯ ದುರಂಧರತೆಯನ್ನು ಕುರಿತು ಮಧುರನು ಒಂದು ಉದಾಹರಣೆಯನ್ನು ಕೊಟ್ಟಿರುವನು. ಒನ್ಮೆ ಕೆಲವರು ಘಾತುಕರು ದೇವರಾಯ ಮಹಾರಾಯನನ್ನು ಕೊಲ್ಲಬೇಕೆಂದು ನಿಶ್ಚಯಿಸಿ ಚನ್ನಾಗಿ ಮಸೆದ ಆಯುಧಗಳನ್ನು ಕೈಲಿಹಿಡಿದು ರಾಜದ್ವಾರವನ್ನು ಮುತ್ತಿದರು. ಈ ಸಂಚನ್ನು ಲಕ್ಷ್ಮೀಧರನು ತಿಳಿದು ಶತ್ರುಬಲವನ್ನು ಲೆಕ್ಕಿಸದೆ "ತನ್ನ ಪತಿಕಾರ್ಯ್ಯಮೆ ಕಾರ್ಯ್ಯಮೆನುತ್ತ" ಮಹಾಸಾಹಸದಿಂದ ವಂಚಕರನ್ನು ವಂಚಿಸಿ ತನ್ನೊಡೆಯನ ಪ್ರಾಣವನ್ನು ಕಾಪಾಡಿದನಂತೆ.

ಲಕ್ಷ್ಮೀಧರನ ವಿಷಯವಾದೀ ಕಡೆನುಡಿಗಳನ್ನು ಮಧುರನ ಸವಿನುಡಿಗಳಿಂದಲೇ ಮುಗಿಸುವೆನು.

ವೃ॥ ಪೊಗಳಲೊಂಬುಳಿಯೋದೆ ಪೆಂಪಿನ ಯಶೋಲಕ್ಷ್ಮೀಧರಂ ಬಲ್ಲವ
ಬ್ಬಿಗೆಗೊಳ್ಪಂಪಿನ ಸೊಂಪುವೆತ್ತ ಕವಿತಾಲಕ್ಷ್ಮೀಧರಂ ರಾಜನೀ।
ತಿಗೆ ನೇಪಥ್ಯದೆ ಮಹಾಪ್ರಧಾನಪದವೀಲಕ್ಷ್ಮೀಧರಂ ಧಾತ್ರಿಯೊಳ್
ನೆಗಳ್ದಂ ನಿರ್ಮ್ಮಲರಾಮಚಂದ್ರತನಯಂ ಸನ್ಮಂತ್ರಿಲಕ್ಷ್ಮೀಧರಂ॥

---

## ಪರಿಶಿಷ್ಟ I.

### ಕನ್ನಡ ನಾಟಕ

ಕರ್ಣಪಾರ್ಯನ (ಕ್ರಿ.ಶ. ೧೧೪೦) 'ಚೇತೋಹರಮೆಂಬಿನಮೆಸೆವ ಮಾಳವೀಮಾಧವ,' ಕೇಶಿರಾಜನ (ಕ್ರಿ.ಶ. ೧೨೬೦) 'ಶ್ರೀಚಿತ್ರಮಾಲೆಯಂತೆ ಸುಭದ್ರಾಹರಣಂ, ಪ್ರಬೋಧಚಂದ್ರಂ' ಇವೆಲ್ಲವೂ ನಾಟಕಗಳಾಗಿರಬೇಕೆಂದು ಕವಿಚರಿತ್ರಕಾರರು ಬರೆದಿರುವರು.[1] ಕಾರಣಗಳಿಲ್ಲದೆ ಕವಿಚರಿತ್ರಕಾರರು ಹೀಗೆ ಪೂಹಿಸಿರಲಾರರು. ಆದರೆ ಅವರು ಯಾವ ಕಾರಣಗಳನ್ನೂ ಸೂಚಿಸಿರುವುದಿಲ್ಲ.

---

[1] *Lives of Kannada Poets*, Vol. I, ಅವತರಣಿಕೆ, page 10.

ರನ್ನನ (ಕ್ರಿ.ಶ. ೯೯೩) ಗದಾಯುದ್ಧದಲ್ಲಿನ 'ಅಱುತ್ತುಂಬಂದ ತನ್ನಂ (ಪಾಂಚಾಲಿ) ನಗುತ್ತುಂ ಪೋಪಂತೆ ಸಂತೋಷಮಂ ಮಾಡಿಸಿದ' ವಿದೂಷಕನನ್ನು[1], 'ಪ್ರಸ್ತಾವ' 'ಕಂಚುಕಿ' ಎಂಬ ಹಲವು ಕಬ್ಬಗಳನ್ನು[2], ನಾಗಚಂದ್ರನ (ಕ್ರಿ.ಶ. ೧೧೦೫) ರಾಮಚಂದ್ರಪುರಾಣದ

'ಶ್ರೀಕೇಳೀನಿಲಯಂ ನಿಜಾಂಘ್ರಿಕಮಲಂ ವಿದ್ಯಾನಟೀನಾಟ್ಯವೇ
ದೀಕಲ್ಪಂ ಮುಖಚಂದ್ರಬಿಂಬಮಖಿಲೇಂದ್ರೋತ್ತಂಸಮಾಣಿಕ್ಯದೀ।
ಪ್ತಾಕೀರ್ಣಂ ಹರಿಪೀಠಪಾರ್ಶ್ವಮೆನಿಪಂ ಪೂಜಾರ್ಹನಾರ್ಹಂತ್ಯಲ
ಕ್ಷ್ಮೀಕಾಂತಂ ಮುನಿಸುವ್ರತಂ ನಮಗೆ ಮೋಕ್ಷೈಕಾರ್ಥಸಂಸಿದ್ಧಿಯಂ॥'

ಎಂಬ ಶ್ಲೋಕವನ್ನು, ರುದ್ರಭಟ್ಟನ (ಕ್ರಿ.ಶ. ೧೧೮೦) ಜಗನ್ನಾಥವಿಜಯದ

'ಶ್ರೀರಾಮಾನಟಿ ಕೌಸ್ತುಭದ್ಯುತಿಕಿರತ್ಪುಷ್ಪಾಂಜಲಿಕ್ಷೇಪವ
ಕ್ಷೋರಂಗಸ್ಥಳಿಯಾದ ಪಾದನಖರೋಚಿರ್ಗಂಗೆ ಪೃಥ್ವೀಶಕೋ।
ಟೀರವ್ಯಾಪ್ತಿಗೆ ಸಂದ ಚಕ್ರರವಿದೈತ್ಯಧ್ವಾಂತಮಂ ಗೆಲ್ದ ಭೂ
ಭಾರಚ್ಛೇದವಿನೋದಿ ಕೃಷ್ಣನೆಮಗೀಗಾನಂದಸಂದೋಹಮಂ॥'

ಎಂಬ ಆದಿ ಶ್ಲೋಕವನ್ನು, ಕವಿಕಾಮದೇವನ (ಕ್ರಿ.ಶ. ೧೨೦೦) ಶೃಂಗಾರರತ್ನಾಕರದ ಮೂರನೆಯ ಪರಿಚ್ಛೇದದಲ್ಲಿನ

'ಕಂ॥ ನವರಸಭೇದಮಂ ಭಾವವಿಧಾನಮನಱಿಯೆ ಪೇೞ್ದೆ ನಿಲ್ಲಿಂದಿತ್ತಲ್।
ಕವಿಮುಖ್ಯರ್ಗೆ ನಾಯಕ ವಿವರಣೆಯಂ ನಾಯಿಕಾವಿಕಲ್ಪಾಂತರಮಂ॥

ಚತುರ್ಥಪರಿಚ್ಛೇದದಲ್ಲಿನ

'ಕಂ॥ ನೆಱೆಯೆ ರಸಭಾವನಿಧಿಯಂ ನೆಱೆನಾಯಕನಾಯಿಕಾಪರೀಕ್ಷೆಯನಿಂಬಾ।
ಗಱಿಪಿದೆ ನಿತ್ತಲ್ ತಱಿಸಂದಱಿಪಿದಪೆಂ ಸುಸಖೀವಿಕಲ್ಪಾಂತರವಂ॥

ಎಂಬ ಪದ್ಯಗಳನ್ನು, ಮಲ್ಲಿಕಾರ್ಜುನನ (ಕ್ರಿ.ಶ. ೧೨೪೫) ಸೂಕ್ತಿಸುಧಾರ್ಣವದೊಳಗಿನ

"ಬರೆಯಲ್ಬಾರದು ಬರ್ಣಿಸಲ್ಕರಿದು ನೋಡಲ್ಕಾಡಮೊಡ್ಡೈಸಲ
ಚ್ಚರಿ ಭೂಮಂಡಲಮಧ್ಯದಿಂದೊಡೆದು ಮೂಡಿತ್ತಂಬಿನಂ ಚೆಲ್ವನಾ।
ಕರುಮಾಡಂ ನವಭೂಮಿಕಾಪ್ರಕಟಿತಂ ವಿಷ್ಕಂಭವಿಸ್ತಾರಬಂ
ಧುರಸಂಧಿಪ್ರತಿಭಾಸಿ ನಾಟಕದ ಪಾಂಗಿಂ ಚೋಳಕಂ ಲಾಳಕಂ॥"

ಎಂಬ ವೃತ್ತವನ್ನು, ಭೀಮಕವಿಯ (ಕ್ರಿ.ಶ. ೧೩೬೯) ಬಸವಪುರಾಣದ

'ಸಕಲಭಕ್ತಾಸ್ಥಾನದೊಳ್ಕೇಳಿಕೆಗಳೊಗ್ಗಿನ ಮೇಳವದ ನಾ
ಟಕದ ಪಾತ್ರದ ಪೇರಣೆಯ ಜೋಳಿಗಳ ಜೋಕೆಗಳ।
ಪ್ರಕಟವಿಸಯೆಲ್ವೇಣುವೀಣಾನಿಕರನಾದವಿನ್ಯಾರೆಯ ಕೋಭಾ
ಷ್ಟಕ ಪ್ರೊದರುತಿರೆ ಚಾಂಗು ಭಲರೆಂಬಾರವಂಗಳೊಳು॥'

ಎಂಬ ಪದ್ಯವನ್ನು[3], ನಿಜಗುಣ ಶಿವಯೋಗಿಯ (ಕ್ರಿ.ಶ. ೧೫೦೦) ವಿವೇಕಚಿಂತಾಮಣಿಯ ನಾಲ್ಕನೆಯ ಪ್ರಕರಣದಲ್ಲಿನ

"ಬಳಿಕ ನಾಟಕದಲ್ಲಿ ದಿನದಿನಕಭಿನಯಿಸಲ್ತಕ್ಕ, ರಸ ಭಾವ ಸಂವಿಧಾನ ಆಶ್ರಯಂಗಳೆಂಬ ಚತುರ್ವಿಧ ಪ್ರಬಂಧಾಂಶಂಗಳಂ, ಮುಖದೃಷ್ಟಿಹಸ್ತಪಾದಂಗಳಭಿನಯಿಪ ಲಕ್ಷಣಂ ತಪ್ಪದೆ, ಮೇಲೆ ಮುಖರಸವೇ ಹಾವ, ನೇತ್ರಸ್ಪಂದವೇ ಭಾವ, ಪದನ್ಯಾಸವೇ ವಿಲಾಸ, ಭ್ರೂವಿಕ್ಷೇಪಣವೇ ವಿಭ್ರಮವೆಂಬ ಚತುರ್ವಿಧನೋಹವಮಂ ವ್ಯವೆತ್ತು, ಶುದ್ಧ ದೇಶೀಯವೆಂಬ ದ್ವಯಮಾ ವಿವರಗಳುಂಡು, ತಾಂಡವ ನಾಟ್ಯ ನೃತ್ತ ಲಾಸ್ಯ ಗುಂಡಿಲ ಪೆಕ್ಕಣ ಲಚ್ಚಣ ಅಪರಿಪಾತ್ರ

[1] ಗದಾಯುದ್ಧ, ದ್ವಿತೀಯಾಶ್ವಾಸ, ಪ್ರಜ 23-24.
[2] ಗದಾಯುದ್ಧ, ಪ್ರಥಮಾಶ್ವಾಸ, ಪ್ರಜ 13.
[3] ಬಸವಪುರಾಣ, ಸಂಧಿ 4, ಪದ್ಯ 7.

ಸುಪಾತ್ರ ಸರ್ವತೋಭದ್ರವೆಂಬ ದಶವಿಧಪಾತ್ರಂಗಳಂ ಬೀರಿ, ಲಯಗಾನಾಭಿನಯರಸಾಲಂಕಾರಭಾವಶೋಭಾಮರಸ್ಯವಂ ತೋರಿ, ಶ್ರುತಿನಯನಹೃದಯಾಕರ್ಷಣವಂಗ್ಯವ ನರ್ತಕನರ್ತಕಿಯರಿಂದುಪಾಸಿತರಾಗಿ, - - - -" ಎಂಬ ಭಾಗವನ್ನೂ,

ವಾಚಕರು ಕೊಂಚ ಗಮನಿಸಿ ಓದಿದ್ದೇ ಆದರೆ ಕನ್ನಡಸಾಹಿತ್ಯಕ್ಕೆ ನಾಟಕವೂ, ಕನ್ನಡಿಗರಿಗೆ ರಂಗಭೂಮಿಯೂ ಹೊಸದಲ್ಲವೆಂದು ತೋರಿಬರದೆ ಇರದು.

ಭಟ್ಟಾಕಳಂಕನು (ಕ್ರಿ.ಶ. ೧೬೦೪) ತನ್ನ ಶಬ್ದಾನುಶಾಸನದಲ್ಲಿ 'ಶಬ್ದಾಗಮಯುಕ್ತ್ಯಾಗಮಪರಮಾಗಮ ವಿಷಯಾಣಾಂ ತಥಾ ಕಾವ್ಯನಾಟಕಾಲಂಕಾರಕಲಾಶಾಸ್ತ್ರವಿಷಯಾಣಾಂ ಚ ಬಹೂನಾಂ ಗ್ರಂಥಾನಾಮಪಿ ಭಾಷಾಕೃತಾನಾಮುಪಲಭ್ಯಮಾನತ್ವಾತ್' ಎಂದು ತನ್ನ ಕಾಲದಲ್ಲಿ ಕನ್ನಡದಲ್ಲಿ ನಾಟಕಗಳಿದ್ದುವೆಂದು ಹೇಳಿರುವನು. ಆದರೆ ಆ ನಾಟಕಗಳಲ್ಲಿ ಒಂದಾದರೂ ನಮಗೆ ಸಿಕ್ಕಿಲ್ಲ. ೧೭ ನೇ ಶತಮಾನದ ಸಿಂಗರಾರ್ಯಕೃತ ಸಂಸ್ಕೃತರತ್ನಾವಳಿಗೆ ಭಾಷಾಂತರವಾದ ಮಿತ್ರವಿಂದಾಗೋವಿಂದವೆಂಬ ನಾಟಕ ವೊಂದೇ ಈಗ ನಮಗೆ ದೊರೆತಿರುವುದು. ಅಲ್ಲದೆ ಕವಿಚರಿತ್ರಕಾರರು ಪ್ರಥಮಸಂಪುಟದ ಅನುಬಂಧದ 13 ನೇ ಪುಟದಲ್ಲಿ 'ಪ್ರಭುನಾಟಕ' (ಕ್ರಿ.ಶ. 17 ನೇ ಶತಮಾನ) ವೊಂದನ್ನು ಗುರುತಿಸಿರುವರು.

ಕೆಳದಿಯರಸರು ಅರಮನೆಯಲ್ಲಿ ನಾಟ್ಯರಂಗವನ್ನು ಕಟ್ಟಿಸಿ ಅಲ್ಲಿ ಅನೇಕ ನಾಟಕಗಳನ್ನು ಆಡಿಸುತ್ತಿದ್ದರೆಂದು 'ಕೆಳದಿನೃಪವಿಜಯ' ದಿಂದ ತಿಳಿದುಬರುತ್ತದೆ (ಆಶ್ವಾಸ 5, ಪುಟ 76, ಪದ್ಯ 30).

ಭಟ್ಟಾಕಳಂಕನ ಹೇಳಿಕೆಯನ್ನು ಸ್ಥಿರಪಡಿಸಲು ಶಾಸನದ ಆಧಾರವೊಂದು ದೊರೆತಿರುವುದು. ಕರ್ನೂಲು ತಾಲ್ಲೂಕು ಚರುವುಬೆಳಗಲ್ಲೆಂಬ ಗ್ರಾಮದಲ್ಲಿರುವ ಕೇಶವದೇವಾಲಯದ ಒಂದು ಕಂಭದಮೇಲೆ ವೀರಕೃಷ್ಣರಾಯ ಮಹಾರಾಯನ (ಶಕ ೧೪೩೬ ಭಾವ, ವೈಶಾಖ ಶು. ೧೫) ಶಾಸನ ವೊಂದುಂಟು[1]. ಇದರಲ್ಲಿ ತಿರುಪತ್ತೂರು ಸೋಮರಸನ ಮಗ ಕರಣಂ ಬಸವರಸನು ಪಾತ್ರಿ ಪೋತವರದ ನಟ್ಟುವ ತಿಂಮಯನ ಮಗಳಿಗೂ, ತಾಯಿಕೊಂಡನಾಟಕದ ಚೇಗಯನ ಮಗ ನಟ್ಟುವ ನಾಗಯ್ಯನಿಗೂ ಭೂಮಿಯನ್ನು ದಾನಮಾಡಿದಂತೆ ಬರೆದಿದೆ.

ಆದಕಾರಣ ೧೬ ನೇ ಶತಮಾನದಲ್ಲೇ ಕನ್ನಡ ನಾಟಕಗಳಿದ್ದುವೆಂದೂ, ಅವುಗಳನ್ನು ಆಗಾಗ್ಗ ರಂಗಸ್ಥಲದಲ್ಲಿ ಪ್ರದರ್ಶಿಸುತ್ತಿದ್ದರೆಂದೂ, ವೇಶ್ಯೆಯರು ಪಾತ್ರಗಳನ್ನು ಧರಿಸುತ್ತಿದ್ದರೆಂದೂ, ನಾಟಕಕಲೆಗೂ ನಟರಿಗೂ ಪ್ರೋತ್ಸಾಹ ವಿತ್ತೆಂದೂ ವಿಶದವಾಗುತ್ತದೆ.

## ಪರಿಶಿಷ್ಟ II

### 'ರಚಿಸು' ಎಂಬುದಕ್ಕೆ ಪರ್ಯಾಯ ಪದಗಳು

ಅನೇಕ ಶಿಲಾಶಾಸನಗಳ ಅಂತ್ಯದಲ್ಲಿ 'ಪೇಳ್ದ ನಟ್ಟುತ್ತಿಯಿಂ ಸಾಸನಮಂ (Ep. Carn., Mysore, Pt. II, ನಾಗಮಂಗಲ 28) 'ರಾಮಯ್ಯಂ ಬರೆದಂ' (Ep. Ind., Vol. XV, p. 332) 'ಶ್ರೀಮತ್ಕವಿರಾಜವಲ್ಲಭಂ ಕಪ್ಪಣಭಟ್ಟರ ಲಿಖಿತಂ' (Ep. Carn., Shimoga, Pt. II, ಸೊರಬ 184) (Lives of Kannada Poets, Vol. I, p. 361). 'ಒರೆದಂ ರವಿನಾಗಭಟ್ಟ ನತ್ಯಾದರದಿಂ' (Ind. Ant., Vol. XII, p. 223) ಎಂದು ಅನೇಕಬಗೆಯಾಗಿ ಕಾಣಬರುತ್ತದೆ. ಹಲವು ವಿದ್ವಾಂಸರು 'ಒರೆದ' 'ಬರೆದಂ' 'ಲಿಖಿತ' ಮೊದಲಾದ ಶಬ್ದಗಳಿಗೆ 'ರಚಿಸಿದಂ' ಎಂಬ ಅರ್ಥವನ್ನು ಕೊಡಲು ಒಪ್ಪುವದಿಲ್ಲ. ಅದಕ್ಕೆ ಬದಲಾಗಿ 'ಕೈಬರಹದಿಂದ ಬರೆದರು' ಎಂಬದಾಗಿ ಅರ್ಥವನ್ನು ಕೊಡುವರು. 'ಬರೆ' 'ಪೇಳ್' ಎಂಬ ಶಬ್ದಗಳಿಗೆ 'ರಚಿಸು' ಎಂಬ ಅರ್ಥವಲ್ಲದೆ ಬೇರೆ ಅರ್ಥವಿಲ್ಲವೆಂದು ನಾವು ಹೇಳುವುದಿಲ್ಲ. ಸಾಧಾರಣವಾದ ಅರ್ಥದಲ್ಲಿ ಬರೆಯುವುದೆಂದರೆ ಕೈಬರವಣಿಗೆ ಯೆಂದು ಅರ್ಥ. ಪೇಳೆಂದರೂ ಹೇಳೆಂದು ಸಾಧಾರಣವಾದ ಅರ್ಥ. ಆದರೆ 'ಬರೆ' 'ಪೇಳ್' ಎಂಬ ಧಾತುಗಳ ಪರಿಶುದ್ಧಾರ್ಥವು 'ರಚಿಸು' ಎಂದೇ. ಇದಕ್ಕೆ ಅಡ್ಡಿಯೇ ಇಲ್ಲ. ಯಾಕೆಂದರೆ

'ಸುಕರಕವಿಯಪ್ಪಚರಾಜನುಂ ಸಹಜಕವಿ ಮಲ್ಲಿದೇವನುಂ ಬರೆದರು' (Ep. Ind., Vol. V, p. 231, foot-note 1) 'ಕವಿರಾಜಬಾಂಧವಂ ಬರೆದನಿದಂ' (Ep. Carn., Mysore, Pt. II, ಹೆಗ್ಗಡದೇವನಕೋಟೆ, 18) 'ಕವಿತಾಮನೋಹರಂ ಕವಿತಳರ ಕರ್ಪರಸಂ ಬರೆದಂ' (Ind. Ant., Vol. XIII, p. 93) 'ಕವಿ ಮಾದಿರಾಜ[ಂ] ಬರೆದಂ[2]' 'ಶಾಸನಮನಿದಂ ಬರೆದನಾಶುಕವಿ ನಿಟಿಲಾಕ್ಷಂ' (Ep. Carn., Vol. VII, ಶಿಕಾರಿಪುರ, 98).

---

1 Madras Fpigraphical collection for 1915, No. 558.
2 *Lives of Kannada Poets*, Vol. I, p. 278.

‘ಲಕ್ಷ್ಮೀಧರಸಚಿವಂಗಾಚಂದ್ರಾರ್ಕ್ಕವೊದವಿದಾಯುಂ ಶ್ರೀಯುಂ ಸಂಗತಿವಡದಿರೆ ಬರೆದಂ ಮಂಗಳವಂ’ (S.I.I. Texts, Vol. IV, No. 38 of 1889) ಎಂಬ ಅನೇಕ ಪ್ರಯೋಗಗಳು ಕಾಣಬರುತ್ತವೆ. ಈ ಆರು ಉದಾಹರಣೆಗಳಲ್ಲೂ ‘ಬರೆದ’ ಎಂಬ ಕ್ರಿಯಾ ಪದಕ್ಕೆ ಅರ್ಥವೇನು? ಸುಕರಕವಿ, ಸಹಜಕವಿ, ಕವಿರಾಜಬಾಂಧವ, ಕವಿತಾಮನೋಹರ, ಆಶುಕವಿ, ಎಂಬದಾಗಿ ‘ಬರೆದ’ ವರನ್ನು ವಿಶೇಷಿಸಿರುವುದರಿಂದಲೇ ಈ ಶಬ್ದಕ್ಕೆ ‘ರಚನೆ’ ‘ಕವಿತೆ’ ಎಂಬ ಅರ್ಥವು ವಿಶದ. ‘[ಶಾಸನವ] ಹೇಳಿದ ಕವಿ ಹಂಸದೇವ (Ep. Carn., Vol. XII, ಚಿಕ್ಕನಾಯಕನಹಳ್ಳಿ, 32) ‘ಪೇಳ್ದನುಜ್ಜಿತ್ತಿಯಿಂ ಸಾಸನಮಂ’ (Ibid, Vol. IV, ನಾಗಮಂಗಲ, 28) ‘ನಿರ್ಮಿಸಿದಂ ಕವಿನಾಗದೇವನ್ (Ibid, Vol. VI, ಕಡೂರು, 95) ಎಂಬೆಡೆಯಲ್ಲಿಯೂ ‘ರಚಿಸಿದ’ ಎಂಬರ್ಥದಲ್ಲೇ ‘ಹೇಳಿದ’ ‘ಪೇಳ್ದ’ ‘ನಿರ್ಮಿಸಿದ’ ಎಂಬ ಕ್ರಿಯಾಪದಗಳು ಉಪಯೋಗಿಸಲ್ಪಟ್ಟಿವೆ.

ಶಾಸನಗಳ ಮಾತಂತಿರಲಿ. ಕನ್ನಡ ಸಾಹಿತ್ಯದಲ್ಲಿಯೂ ‘ರಚಿಸು’ ಎಂಬರ್ಥದಲ್ಲಿ ಮೇಲೆಕಂಡ ಶಬ್ದಗಳೇ ಅಲ್ಲದೆ ಇನ್ನೂ ಅನೇಕ ಶಬ್ದಗಳು ಕಾಣಬರುವುವು. ಜನವಶ್ಯದಲ್ಲಿ ‘ಅಚಿವವರ ಮೆಚ್ಚೆರ್ದೆಯನಿಂಬುಗೊಳ್ವಂತೆ ಬರೆದಂ’ ಎಂದು ಕಲ್ಲರಸನೂ (Lives of Kannada Poets, Vol. II, p. 93), ಛಂದೋಂಬುಧಿಯಲ್ಲಿ (p. 4) ‘ಪೇಳಲೊಡರ್ಚಿದೆನೀ ಪ್ರಬಂಧಮಂ’ ಎಂದು ನಾಗವರ್ಮನೂ, ಪಂಚತಂತ್ರದಲ್ಲಿ ‘ಪೊಸತಾಗಿರೆ ವಿರಚಿಸುವೆಂ’ ಎಂದು ದುರ್ಗಸಿಂಹನೂ (Lives of Kannada Poets, Vol. I, p. 128), ಉದ್ಭಟಕಾವ್ಯದಲ್ಲಿ ‘ಕೂರ್ತೊರೆವೆನೀ ರುಚಿರಪ್ರಬಂಧಮಂ’ ಎಂಬದಾಗಿ ಸೋಮರಾಜನೂ (Ibid, p. 272), ಧರ್ಮನಾಥಪುರಾಣದಲ್ಲಿ ‘ನಿರ್ಮಿತಮಪ್ಪ’ ಎಂದು ಮಧುರನೂ (Ibid, p. 348) ಬರೆದಿರುವರು. ಇದೇ ಅರ್ಥದಲ್ಲಿಯೇ ಮಂಗರಸ ‘ನುಸುರಿದನು’; ಜನ್ನನು ‘ಮಾಡಿದನು’; ಮಲ್ಲಿಕಾರ್ಜುನನು ‘ಸಂಯೋಜಿಸಿದನು’; ಮತ್ತೊಬ್ಬ ಮಲ್ಲಿಕಾರ್ಜುನನು ‘ಸೊಲ್ಲಿಸಿದನು’. ಆದಕಾರಣ ಬರೆದ, ಪೇಳ್ದ, ಹೇಳಿದ, ಉಸಿರ್ದ, ಲಿಖಿತ, ಬರಪ ಎಂದರೆ ‘ಕವಿತೆಯನ್ನು ಮಾಡಿದ’ ನೆಂದು ಅರ್ಥವೇ ಹೊರತು ‘ಕೆತ್ತಿದನು’ ‘ಓದಿಹೇಳಿದನು’ ‘ಪ್ರತಿಮಾಡಿದನು’ ಎಂದು ಅರ್ಥವಾಗಲಾರದು. ಕೆತ್ತಿದನು ಎಂಬುದಕ್ಕೆ ಶಾಸನಗಳಲ್ಲಿ ‘ಕಣ್ಡರಿಸಿದ’ ‘ಹೊಯ್ದ’ ‘ಕಡಿದ’ ‘ಕಡದ’ ‘ಬಿಸಗೆಯ್ದ’ ಎಂಬ ಪ್ರತ್ಯೇಕ ಶಬ್ದಗಳು ಉಪಯೋಗಿಸಲ್ಪಟ್ಟಿವೆ.

---

## INDEX TO THE PREFACE.


| | Page |
|---|---|
| Abhinava-Sarasvati, title of Padmaladēvi | viii |
| Ādi-Pampa, poet | vii |
| Āndhra | viii |
| Aśōka, inscriptions of | vii |
| Basava, religious reformer | vii |
| Banavāsi, the capital of the Kadambas | vii |
| Bhaktimārga, religious movement | vii |
| Bhāshā-Chaturbhuja, title | viii |
| Bhaṭṭākalaṁka, author | vii |
| Bilhaṇa, poet | viii |
| Brahmanic | vii |
| Buddhism | vii |
| Chālukya, dynasty | viii |
| Champū, classic style of composition | vii |
| Champū-Kāvya | viii |
| Chhandōmbudhi, work | vii |
| Chandrarāja, author | vii |
| Dāmapayya-Daṇḍanāyaka, chief | viii |
| Dēvarāya II, Vijayanagara King | viii |
| *Dynasties of the Kanarese Districts*, quoted | viii |
| Epigraphy, Annual Reports on | viii |
| Erumaiyūran, chief mentioned in the Tamil Sangam literature | vii |
| Honna, poet | vii |
| Hoysala, dynasty | viii |
| Jagannāthadāsa, poet-saint | vii |
| Jaina | vii |
| Janna, poet | vii |
| Kadambas, people | vii |
| Kanakadāsa, poet-saint | vii |
| Kannaḍa, language and literature | vii, viii |
| Kannaḍigas, the Kanarese people | vii |
| Karṇāṭaka, language, literature and country | vii, viii |
| Kavirājamārga, work on Rhetorics | vii |
| Kīrtivarma, author | vii |
| Kittel, Rev., | vii |
| Krishṇadēva-Rāya, Vijayanagara King | viii |
| Lakshmīdhara, minister of Dēvarāya II and poet | viii |
| *Lives of Kannada Poets*, work | vii, viii |
| Mādhavāchārya (Vidyāraṇya), religious teacher | viii |
| Nāgārjuna, poet | vii |
| Nāgavarma, author | vii |
| Nandamapūṇḍi, village | viii |
| Narasimhāchārya, R. | vii, viii |
| Narasimhāchārya, S. G. | vii |
| Nārāyaṇa-Bhaṭṭa, poet | viii |
| Nṛipatuṅga, author | vii |
| Oxyrhynchus, papyri at, | vii |
| Padmaladēvī, Queen | viii |

| | Page |
|---|---|
| Pāṇini, | vii |
| Pennapari-nāḍu, province | viii |
| Prākṛita, | viii |
| Pratibhā-Sarasvatī, title of Rebbaṇabbe | viii |
| Purandaradāsa, poet-saint | vii |
| Ragaḷe, style of composition | vii |
| Rājāditya, author | vii |
| Rājarāja-Narēndra, Eastern Chāḷukya King | viii |
| Ranna, poet | vii |
| Rāshṭrakūṭa, dynasty | viii |
| Raviga-chamūpa, chief, | viii |
| Rebbaṇabbe, woman | viii |
| Rice, L. | vii |
| *Śabdānuśāsana*, work | vii |
| Saṁskṛita, | viii |
| Sāṅgatya, style of composition | vii |
| Shaṭpadi, style of composition | vii |
| Sītādēvī, queen | viii |
| Tāḍpatri, capital of Pennapari-Nāḍu | viii |
| Tamil Sangam | vii |
| *Tāyikunda-Nāṭaka*, drama | viii |
| Tribhuvanamalla, Western Chāḷukya King | viii |
| Tribhuvanamalladēva-chōḷa-Mahārāja | viii |
| Uchchaṅgi, fortress | viii |
| Udayāditya, author | vii, viii |
| Udayāditya, chief, | viii |
| Vachana, style of composition | vii |
| Varāhamihira, | vii |
| Vātsyāyana, | vii |
| Vaishṇava, sect | vii |
| Vijayanagara, dynasty | viii |
| *Vikramāṅkadēvacharita*, work | viii |
| Vimalōdaya, poet | viii |
| Vīraśaiva, sect | vii |
| Yādava, dynasty | viii |

## ಅನುಕ್ರಮಣಿಕೆ.


| | |
|---|---|
| ಅಂಗ | 7, 13 |
| ಅಕಲಂಕಾಶಂಕನಾಮಾತ್ಯ | 8 |
| ಅಂಧ್ರ, ಆಂಧ್ರ | 8, 13n |
| ಅಜರಾಜ | 20 |
| ಅರ್ಜುನ | 17 |
| ಅತಿವೀರ | 1n |
| ಅತ್ತಿರಾಜ, ಅತ್ಯರಸ | 14 |
| ಅಧಿರಾಜಮಂಗಲ | 1n, 2 |
| ಅನುಪಮ | 1n |
| ಅನುಪಮಕವಿ | 3, 4, 13 |
| ಅನುಪಮಾ | 1n |
| ಅಪರಿಪಾತ್ರ | 19 |
| ಅಭಿನವಸೋಮೇಶ್ವರದೇವ, ಸೋಮೇಶ, ಸೋಮನಾಥ | 9, 10 |
| ಅಮ್ಮುಗಿ | 11 |
| ಅರವತ್ತುಕಂಭದಗುಡಿ | 5 |
| ಅರುಹತ್ | 6 |
| ಅರುಂಧತಿ | 6, 12, 14 |
| ಆಂಧ್ರದೇಶ | 9, 12 |
| ಆಂಧ್ರಭಾರತ | 8 |
| ಆತ್ರೇಯಗೋತ್ರ | 1 |
| ಆದಿತ್ಯವರ್ಮ | 1n |
| ಆದಿತ್ಯವರ್ಮ, (ಚಾಳುಕ್ಯರಾಜ) | 2 |
| ಆದಿತ್ಯಕರಿಕಾಲ | 2 |
| ಆನಂದರಾಮಾಯಣ | 16, 18 |
| ಆನಂದಾರಾಮ | 17 |
| ಆಪಸ್ತಂಬ | 8 |
| ಆಶುಕವಿ | 20, 21 |
| ಆಹವಮಲ್ಲದೇವ | 14 |
| ಇಂದ್ರ, ಸುರಾಧಿಪತಿ | 12, 14 |
| ಇಂದ್ರ—III (ನಿತ್ಯವರ್ಷ) | 3, 11 |
| ಇಂದ್ರಕೀರ್ತಿ | 6 |
| ಉದಯಾದಿತ್ಯ | 13, 14 |
| ಉದಯಾದಿತ್ಯಾಲಂಕಾರ | 13 |
| ಉದ್ಭಟಕಾವ್ಯ | 21 |
| ಎರೆಯಪ್ಪ | 3 |
| ಏಚಿಕಬ್ಬೆ | 6 |
| ಔದುಂಬರಾಧರಣ | 14 |
| ಕಕ್ಕಲ | 4 |
| ಕದಂಬ | 13 |
| ಕಂಚಲೆ, ಕಂಚಲದೇವಿ, ಕಂಚಿಯಬ್ಬೆ | 4, 14 |
| ಕಂಚುಕಿ | 19 |
| ಕಂಚಿನಾರ್ಯ | 8 |
| ಕಂಚಿನ ಸೋಮಯಾಜಿ | 8 |
| ಕಟ್ರಳಿ | 1n |
| ಕಂಠೀರವಕೂಪ | 3 |
| ಕಂತೆಯ ಭಾರ | 4 |
| 'ಕಂಡರಿಸು, ಹೊಯ್', ಕಡಿ, ಬೆಸಗೆಯ್' | 21 |
| ಕರ್ಣಪಾರ್ಯ | 18 |
| ಕರ್ನಾಟ | 8, 13, 15, 16 |
| ಕರ್ನಾಟಕ ಕವಿಚರಿತ್ರೆ, ಕವಿಚರಿತ್ರೆ | 3, 11, 14, 15, 20 |

ಕತ್ತ, ಕಾರ್ತವೀರ್ಯ I ... ... ... ... 4
ಕನ್ನಡಜಾಣ ... ... ... ... ... 11, 12
ಕನ್ನಡಭಾರತ ... ... ... ... ... 9
ಕನ್ನಡನಾಟಕ ... ... ... ... ... 18, 20
ಕನ್ನಡಿಗಕುಲ ... ... ... ... ... 17
ಕನ್ನಡಿಗರು .. ... ... ... ... 9, 20
ಕನ್ನಮ ... ... ... ... ... 11
ಕಪ್ಪಣ ಭಟ್ಟ ... ... ... ... ... 20
ಕರ್ಪುರಸ ... ... ... ... ... 20
ಕಮಲಾಪುರ ... ... ... ... ... 14
ಕರಣಂ ಬಸವರಸ ... ... ... ... ... 20
ಕಲಿಗಂಗ ... ... ... ... ... 13*n*, 14
ಕಲಿಚೋಳೇಶ್ವರ ... ... ... ... ... 3
ಕಲುಕಡೆಪುರವರಾಧೀಶ್ವರ ... ... ... ... 14
ಕಲ್ಲರಸ ... ... ... ... ... 21
ಕಲ್ಮೇಶ್ವರ ... ... ... ... ... 9
ಕಲ್ಯಾಣ ... ... ... ... ... 6, 14
ಕವಿಕಮಲಾದಿತ್ಯ ... ... ... ... ... 4, 5
ಕವಿಕಾಮದೇವ ... ... ... ... ... 19
ಕವಿಜನಾಚಾರ್ಯ ... ... ... ... ... 6
ಕವಿತಳರ ... ... ... ... ... 20
ಕವಿತಾಮನೋಹರ ... ... ... ... ... 20, 21
ಕವಿತಾಲಕ್ಷ್ಮೀಧರ ... ... ... ... ... 16, 18
ಕವಿಶೇಶಮದಪ್ರಭಂಜನ ... ... ... ... 5
ಕವಿನಾಗದೇವ ... ... ... ... ... 21
ಕವಿವಾದಿರಾಜ ... ... ... ... ... 20
ಕವಿಮಾಧವ, ಮಾಧವ ... ... ... ... 15
ಕವಿರಾಜ ... ... ... ... ... 11
ಕವಿರಾಜಕಲಾವಿಲಾಸ, ಕಲಾವಿಲಾಸ ... ... ... ... 15
ಕವಿರಾಜಬಾಂಧವ ... ... ... ... ... 20, 21
ಕವಿರಾಜಲಕ್ಷ್ಮಣ ... ... ... ... ... 16, 18
ಕವಿರಾಜವಲ್ಲಭ ... ... ... ... ... 20
ಕವಿರಾಜಶೇಖರ ... ... ... ... ... 8, 9
ಕವೀಭವಜ್ರಾಂಕುಶ ... ... ... ... ... 8, 9
ಕಳಿಂಗ ... ... ... ... ... 12
ಕಾಂಚೀಭುಜಂಗೇಶ್ವರ ... ... ... ... ... 3
ಕಾನೀನ (ಕರ್ಣ) ... ... ... ... ... 14
ಕಾಲಂಜರ್ಯ, ಕಳಚುರಿ ... ... ... ... ... 11
ಕಾಲಾಮುಖ ... ... ... ... ... 1
ಕಾವೇರೀ ... ... ... ... ... 1*n*, 2
ಕಾಳಿದಾಸ ... ... ... ... ... 9
ಕಾಳಿಮಯ್ಯ, ಕಾಳಿದಾಸ, ಕಾಳಿಮರಸ ... ... ... ... 5, 6
ಕಿಸುಕಾಡೆಪ್ಪತ್ತು ... ... ... ... ... 6
ಕುಕವಿಮುಖಮುದ್ರ ... ... ... ... ... 13
ಕುಳಕರಣಿ ... ... ... ... ... 7
ಕುಂತಳ ... ... ... ... ... 10, 11, 13*n*
ಕುಱುವತ್ತಿ, ಕುಱುವರ್ತ್ತಿ ... ... ... ... 9
ಕೊಂಡಿವಿಷಯ ... ... ... ... ... 4
ಕೃಷ್ಣ ... ... ... ... ... 19
——ಲೀಲಾ ... ... ... ... ... 16, 18
ಕೃಷ್ಣದೇವರಗುಡಿ ... ... ... ... ... 15
ಕೆಳದಿ ... ... ... ... ... 20
——ನೃಪವಿಜಯ ... ... ... ... ... 20
ಕೇರಳ ... ... ... ... ... 7
ಕೇಶವದೇವಾಲಯ ... ... ... ... ... 20
ಕೇಶಿರಾಜ ... ... ... ... ... 18

| | |
|---|---|
| ಕೊಂಕಣ | 7 |
| ಕೊಂಡಕುಂದಾನ್ವಯ | 6 |
| ಕೊಂಡಕುಂದೆ | 6n |
| ಕೊಡುಂಬೈ, ಕೊಡುಂಬಾಳೂರು | 12n |
| ಕೊಟ್ಟಕಲ್ಲು | 10 |
| ಕೊನಕೊಂಡ್ಲ | 6n |
| ಕೋಗಳಿ (ಕೋಕಳಿ) | 6 |
| ಕೋಟಿಶಂಕರದೇವ | 10 |
| ಖಸ | 7 |
| ಗದಾಯುದ್ಧ | 19 |
| ಗಂಗ | 3, 6, 13n, 14 |
| ಗಂಗರಾಶಿ | 4 |
| ಗಂಡನಾರಾಯಣ | 7 |
| ಗುಣವರ್ಮ | 8 |
| ಗುಮ್ಮಟಾಷ್ಟಕ | 15 |
| ಗೂರ್ಜರ | 7 |
| ಗೋವಿಂದ | 6 |
| ಗೌರಿ | 12 |
| ಚಂದ್ರನಾಥ | 13 |
| ಚಂದ್ರವಂಶ | 13n |
| ಚತುರ್ಥಕುಲ | 12 |
| ಚಳುಕ್ಯ | 2 |
| ಚಾಣಾಕ್ಯ | 18 |
| ಚಾಳುಕ್ಯ (ಪಶ್ಚಿಮ) | 1n, 2, 5, 6, 7, 12, 13, 14 |
| ——(ವಿಕ್ರಮ ವರ್ಷ) | 9, 12 |
| ——(ಪೂರ್ವ) | 8, 9 |
| ಚಿತ್ರಾಪುರ | 5n |
| ಚಿದ್ದರಾಜ | 6 |
| ಚಿಲ್ಲಕಾಚಾರ್ಯ | 5 |
| ಚೆನ್ನಮಂತ್ರಿ | 17 |
| ಚೆರುವುಬೆಳಗಲ್ಲು | 20 |
| ಚೇಗಯ | 20 |
| ಚೇರ | 7 |
| ಚೋಳ | 1n, 4, 7, 13, 14 |
| ಚೋಳೋದಯಾದಿತ್ಯ | 13, 14 |
| ಛಂದೋಂಬುಧಿ | 21 |
| ಜಗದೇಕಮಲ್ಲ II | 10 |
| ಜಗನ್ನಾಥವಿಜಯ | 19 |
| ಜನವಶ್ಯ | 21 |
| ಜನ್ನ | 21 |
| ಜಯಂತ | 12 |
| ಜೈನ | 1, 15 |
| ಜೈನಾಚಾರ್ಯ | 6 |
| ಜೋಗಮ | 11 |
| ಜೋಡುಕಳಶದಗುಡಿ | 7 |
| ತಗಡೂರು | 1, 2, 3 |
| ತಪೋರಾಶಿ | 1 |
| ತಮಿಳುಸಂಘ ಸಾಹಿತ್ಯ | 1 |
| ತಲಕಾಡುನಾಡು | 11 |
| ತಾಡಿಪತ್ರಿ | 13 |
| ತಾಣ್ಡವ | 19 |
| ತಾಯಿಕುಂದನಾಟಕ | 20 |
| ತಾಳಿನಾಣಿಪುರ | 13 |

ತಿರುಪತ್ತೂರು ಸೋಮರಸ ... ... ... ... 20
ತ್ರಿಭುವನಮಲ್ಲ (ವಿಕ್ರಮಾದಿತ್ಯ VI) ... ... ... ... 5, 9, 13
ತ್ರಿಭುವನಸಿಂಹಮುನಿ ... ... ... ... ... 4
ತುರುಷ್ಕ ... ... ... ... ... 7
ತುಂಗಾ ... ... ... ... ... 10
ತುಂಬೇಶ್ವರ ... ... ... ... ... 3
ತೇಜೋರಾಶಿಪಂಡಿತ ... ... ... ... ... 5
ತೈಲಪ, ತೈಲ II ... ... ... ... ... 4, 10, 12
ತೋಮರರಗಳೆ ... ... ... ... ... 6
ತ್ರೈಲೋಕ್ಯಮಲ್ಲ (ಸೋಮೇಶ್ವರ I) ... ... ... ... 5, 6, 7
————————ಭುಜಬಳವೀರನಾರಾಯಣ ... ... ... 14
ದಶರಥರಾಮ ... ... ... ... ... 17
ದಾನವುಲಪಾಡು ... ... ... ... ... 3
ದಾವಣಗೆರೆ ... ... ... ... ... 10
ದಿವಾಕರ ... ... ... ... ... 1, 2, 3
ದುರ್ಗಸಿಂಹ ... ... ... ... ... 21
ದುರ್ವಿನೀತ ... ... ... ... ... 6
ದೇವಕಿ ... ... ... ... ... 17
ದೇವರಾಯ I ... ... ... ... ... 15, 16, 17, 18
ದೇಸೀಯಗಣ ... ... ... ... ... 6
ಧರ್ಮಪುರಿ ... ... ... ... ... 1
ಧರ್ಮನಾಥಪುರಾಣ ... ... ... ... ... 15, 21
ನಟ್ಟುವ ತಿಂಮಯ ... ... ... ... ... 20
———ನಾಗಯ್ಯ ... ... ... ... ... 20
ನರ್ತಕ ... ... ... ... ... 20
ನರ್ತಕಿ ... ... ... ... ... 20
ನನ್ನಪಯ್ಯರಾಣ ... ... ... ... ... 4
ನನ್ನಯ ಭಟ್ಟಾರಕ ... ... ... ... ... 8, 9
ನನ್ನಿಯ ಭಟ್ಟ ... ... ... ... ... 8
ನನ್ನೆಯ ಭಟ್ಟ ... ... ... ... ... 12
ನನ್ನೇಶ್ವರ ... ... ... ... ... 3
ನರಸಿಂಹವರ್ಮ I ... ... ... ... ... 2
ನರಸಿಂಹಾಚಾರ್ಯ, ರಾವ್ ಬಹದ್ದೂರ್ ... ... ... ... 10
ನಂದಮಪೂಂಡಿ ... ... ... ... ... 8, 9
ನಂದಾಪುರ ... ... ... ... ... 13
ನಾಗಚಂದ್ರ ... ... ... ... ... 19
ನಾಗದೇವ ... ... ... ... ... 7
ನಾಗವರ್ಮ ... ... ... ... ... 5, 9, 21
ನಾಗಾಂಬಿಕೆ ... ... ... ... ... 15
ನಾಗ್ಯೆ ... ... ... ... ... 5
ನಾಟ್ಯ ... ... ... ... ... 19
ನಾಯಕ ... ... ... ... ... 19
ನಾಯಿಕಾ ... ... ... ... ... 19
ನಾರಾಯಣ ಭಟ್ಟ ... ... ... ... ... 8, 9
ನಿಜಗುಣಶಿವಯೋಗಿ ... ... ... ... ... 19
ನಿಟಿಲಾಕ್ಷ ... ... ... ... ... 20
ನಿಂಬದಂಡಾಧಿಪ ... ... ... ... ... 6
ನೀತಿವಾಕ್ಯಾಮೃತ ... ... ... ... ... 16, 18
ನೃತ್ತ ... ... ... ... ... 19
ನೃಪಕೇಸರಿ ... ... ... ... ... 1n
ನೇಪಾಳ ... ... ... ... ... 7, 13
ನೈಯಾಯಿಕ ... ... ... ... ... 8
ಪಟ್ಟಬಂಧೋತ್ಸವ ... ... ... ... ... 12
ಪಟ್ಟಸಡೆರುವು ... ... ... ... ... 12
ಪರದುರ್ಗಮರ್ದನ ... ... ... ... ... 1n, 2
ಪರವೀರಜಿತ್ ... ... ... ... ... 1n

| | |
|---|---|
| ಪರಾಂತಕ II | 2n |
| ಪರಾಂತಕವರ್ಮ | 1n |
| ಪಲ್ಲವ | 1n, 2 |
| ಪಲ್ಲವೇಶ್ವರ | 3 |
| ಪಂಚತಂತ್ರ | 21 |
| ಪಂಪ, ಆದಿಪಂಪ | 7, 9 |
| ಪಂಪಾಕ್ಷೇತ್ರ | 15 |
| ಪಾಂಚಾಲಿ | 19 |
| ಪಾಂಚಾಳ | 13 |
| ಪಾಂಡ್ಯ | 2, 7 |
| ——ಗಜಕೇಸರಿ | 14 |
| ಪಾರ್ವತೀ | 6 |
| ಪಾರ್ಶ್ವನಾಥ | 13 |
| ಪುಲಕೇಶಿ II | 2 |
| ಪೆನ್ನಪರಿನಾಡು | 13, 14 |
| ಪೆಕ್ಕಣ | 19 |
| ಪೆರ್ಗಡೆ | 17 |
| ಪೈಶಾಚಿಕ | 8 |
| ಪೋತವರ | 20 |
| ಪೌಲೋಮಿ | 12 |
| ಪ್ರಬೋಧಚಂದ್ರ | 18 |
| ಪ್ರಭುನಾಟಕ | 20 |
| ಪ್ರಸ್ತಾವ | 19 |
| ಪ್ರಾಕೃತ | 8 |
| ಬಲ್ಲಗೌಂಡ | 12 |
| ಬಸದಿ, ಬಸ್ತಿ | 6 |
| ಬಸವಪುರಾಣ | 19 |
| ಬಾಗಲದೇವಿ | 14 |
| ಬಿಜ್ಜಯನಾಯಕ, ಬಿಜ್ಜಯ | 11, 12 |
| ಬಿಜ್ಜಳ | 11 |
| ಬಿಜ್ಜೇಶ್ವರ | 11 |
| ಬುಕ್ಕಣ್ಣ | 17 |
| ಬುಕ್ಕರಾಯ | 15 |
| ಭಟ್ಟಾಕಳಂಕ | 20 |
| ಭಾರತವರ್ಷ | 10, 13n |
| ಭಾರದ್ವಾಜಗೋತ್ರ | 15 |
| ಭಾಸ್ಕರ | 13 |
| ——(ಕವಿ) | 12 |
| ಭಾಸ್ಕರದಾಸ | 7 |
| ಭಾಸ್ಕರಯ್ಯ | 12 |
| ಭೀಮ | 17 |
| ಭೀಮಕವಿ | 19 |
| ಭುಜಂಗ | 3 |
| ಭೂತಿವಿಕ್ರಮಕೇಸರಿ | 1, 2 |
| ಭೂಲೋಕಮಲ್ಲ (ಸೋಮೇಶ್ವರ III) | 12, 13 |
| ಭೋಗೇಶ್ವರ | 3 |
| ಭೋಜ | 7 |
| ಮಗಧ | 7 |
| ಮದರಾಸು ವಸ್ತುಪ್ರದರ್ಶನಶಾಲೆ | 8 |
| ಮಧುರ | 15, 16, 21 |
| ಮಧುರೆ | 1 |
| ಮಧುಸೂದನದೇವ | 10 |
| ಮರು | 13 |
| ಮಲ್ಲಗೌಂಡ I | 12 |
| ——II | 12 |
| ಮಲ್ಲಿದೇವ | 20 |

| | |
|---|---|
| ಮಲ್ಲಿಕಾರ್ಜುನ (ಕವಿ) | 19, 20 |
| ———(ಯತಿ) | 1, 2 |
| ———ದೇವ | 13 |
| ಮಹದೇವಿ, ಮಹಾದೇವಿ | 14 |
| ಮಹಾಗಣನಾಥ | 15 |
| ಮಹಾದೇವಾಲಯ | 11 |
| ಮಹೇಂದ್ರಾಂತಕ | 3 |
| ಮಂಗರಸ | 21 |
| ಮಂಗಳವೇಡ | 11 |
| ಮಾಗಳ | 3n |
| ಮಾಡಗಿಹಾಳ್, ಮಾಳಿಗೆ, ಮಾಳಿಕಾಪುರ | 11 |
| ಮಾದರಸ, ಮಾಧವ | 16 |
| ಮಾಧವ | 17 |
| ಮಾಧವಾಚಾರ್ಯ, ಮಾಧವ | 15n |
| ಮಾನವರ್ಮ | 2 |
| ಮಾಲ್ಯವಕ್ಷವರ್ತ | 15 |
| ಮಾಳಪರಸ | 13 |
| ಮಾಳವ | 1n, 13 |
| ಮಾಳವ್ಯ (ಮಾಳವ) | 7 |
| ಮಾಳವೀಮಾಧವ | 18 |
| ಮಿತ್ರವಿಂದಾಗೋವಿಂದ (ನಾಟಿಕ) | 20 |
| ಮೀಮಾಂಸಕ | 8 |
| ಮುದ್ದದಂಡೇಶ್ವರ | 15, 16 |
| ಮುದ್ದಯಕ್ಕ | 12 |
| ಮುದ್ರಾಮಾತ್ಯ | 18 |
| ಮುನಿಸುವ್ರತ | 19 |
| ಮೂಲಸ್ಥಾನದೇವ | 5 |
| ಮೈಲಾರ | 5 |
| ಮೌಳಿಮಡುವು | 5 |
| ಯದುವಂಶಕೇತು | 1n, 2 |
| ಯೋಗಂಧರಾಯಣ | 18 |
| ರಚಿಸು, ಉಸಿರು, ಬರೆ, ಒರೆ, ಪೇಳ್, ನಿರ್ಮಿಸು | 20, 21 |
| ರಟ್ಟ | 4, 12 |
| ರಣಕಂಭ | 4 |
| ರತಿ | 6, 12 |
| ರತ್ನಾವಳಿ | 20 |
| ರನ್ನ | 7, 19 |
| ರವಿನಾಗ ಭಟ್ಟ | 20 |
| ರಾಚಯ್ಯ | 20 |
| ರಾಜ | 11 |
| ರಾಜರಾಜನರೇಂದ್ರ | 8 |
| ರಾಮಚಂದ್ರಪುರಾಣ | 19 |
| ರಾಮರಸ, ರಾಮ, ರಾಮಚಂದ್ರ | 16, 17, 18 |
| ರಾಮೇಶ್ವರ | 13 |
| ರಾಯಮುರಾರಿ ಸೋಯಿ | 11 |
| ರಾವಪಯ್ಯ | 7 |
| ರಾಷ್ಟ್ರಕೂಟ, ರಾಷ್ಟ್ರ | 3, 13 |
| ರುದ್ರ ಭಟ್ಟ | 19 |
| ರುದ್ರಭೋಜಂಗ, °ಭುಜಂಗ | 3 |
| ರೆಬ್ಬಣಬ್ಬೆ | 6 |
| ರೇವಾರಾಶಿ | 3 |
| ರಿಪುರಾಯದಂಡು ಪಡಿಗಹ | 11 |
| ಲಕ್ಷ್ಮಣಭಾಷಾಕವಿರಾಜ | 15, 16 |
| ಲಕ್ಷ್ಮಿ | 12 |
| ಲಕ್ಷ್ಮೀಧರ, ಲಕ್ಷ್ಮಣ | 15, 16, 17, 18, 21 |

ಲಕ್ಷಣ ... ... ... ... ... 19
ಲಾಕುಳಾಗಮ ... ... ... ... ... 3
ಲಾಳ ... ... ... ... ... 4
ಲಾಸ್ಯ ... ... ... ... ... 19
ವರಗುಣಾ ... ... ... ... ... 1*n*
ವರ್ಣಕವಿ ... ... ... ... ... 11, 12
ವರಾಳ ... ... ... ... ... 13
ವಂಗ ... ... ... ... ... 7
ವಂಜಿವೇಳ್ ... ... ... ... ... 1*n*, 2
ವಾಜಿವಂಶ ... ... ... ... ... 15
ವಾತಾಪಿ ... ... ... ... ... 1*n*, 2
ವಾನಸವಂಶ ... ... ... ... ... 8
ವಿಕ್ರಮಾದಿತ್ಯ I ... ... ... ... ... 2
———— II ... ... ... ... ... 2
———— (ಪಾಂಡ್ಯ) ... ... ... ... ... 10, 11
ವಿಜಯನಗರ ... ... ... ... ... 16
ವಿಜಯಾದಿತ್ಯ ... ... ... ... ... 2
ವಿದ್ಯಾರಾಶಿ (ವಿದ್ದೆರಾಶಿ) ... ... ... ... 1, 2, 3
ವಿದೂಷಕ ... ... ... ... ... 19
ವಿನಯಾದಿತ್ಯ ... ... ... ... ... 2
ವಿವೇಕಚಿಂತಾಮಣಿ ... ... ... ... ... 19
ವಿಷ್ಕಂಧ ... ... ... ... ... 19
ವಿಷ್ಣು ... ... ... ... ... 15
ವಿಷ್ಣುವೃದ್ಧಗೋತ್ರ .. ... ... ... ... 16
ವೀರಕೃಷ್ಣರಾಯ ... ... ... ... ... 20
ವೀರತುಂಗ ... ... ... ... ... 1*n*
ವೀರಪಾಂಡ್ಯ ... ... ... ... ... 1*n*, 2, 9
———— ಸಾಮಂತ .. ... ... ... ... 10
ವೀರಬಲ್ಲಾಳ ... ... ... ... ... 3*n*
ವೆಂಕಯ್ಯ, ರಾಯ್ ಬಹದ್ದೂರ್ ... ... ... ... 1, 2*n*
ವೇಂಗೀ ... ... ... ... ... 7
ವೇಂಗೀಮಂಡಲ ... ... ... ... ... 9
ವೇಣುಗೋಪಾಲಸ್ವಾಮಿಗುಡಿ ... ... ... ... 3*n*
ವೇದಭಾಷ್ಯ ... ... ... ... ... 16
ವೈಶೇಷಿಕ ... ... ... ... ... 8
ಶಚೀ ... ... ... ... ... 6
ಶಬ್ದ (ವ್ಯಾಕರಣ) ... ... ... ... ... 8
ಶಬ್ದಾನುಶಾಸನ ... ... ... ... ... 20
ಶಂಕರಾರ್ಯ, ಶಂಕರ, ಶಂಕ ... ... ... ... 8
ಶಂಭು ... ... ... ... ... 12
ಶಿರುತ್ತೊಂಡನಾಯನಾರು ... ... ... ... 2
ಶಿವಣೂರು ... ... ... ... ... 7
ಶೂದ್ರಕ ... ... ... ... ... 3
———— (ಗ್ರಂಥ) ... ... ... ... ... 3
ಶೃಂಗಾರರತ್ನಾಕರ ... ... ... ... ... 19
ಶೈವ ... ... ... ... ... 1, 3, 4
ಶೈವಭಕ್ತರು ... ... ... ... ... 2
ಶೌಚಾಂಜನೇಯ ... ... ... ... ... 8
ಶ್ರೀಕಂಠಸೂರಿ ... .. ... ... ... 9
ಶ್ರೀವಿಜಯ, ಶ್ರೀವಿಜಯದಂಡನಾಥ ... ... ... ... 3, 4
ಷಣ್ಮುಖ ... ... ... ... ... 12
ಸಮರಾಭಿರಾಮ ... ... ... ... ... 1*n*, 2
ಸರಸ್ವತೀ ... ... ... ... ... 6
ಸರ್ವವಿಕ್ರಮತುಂಗ ... ... ... ... ... 4
ಸರ್ವತೋಭದ್ರ ... ... ... ... ... 20
ಸಂಕವ್ವ ... ... ... ... ... 11

ಸಂಗ್ರಾಮಕಂಠೀರವ ... 6
ಸಂಧಿ ... 19
ಸಂಸ್ಕೃತ ... 8, 13
ಸಹಜಕವಿ ... 20, 21
ಸಾಂಖ್ಯ ... 8
ಸಾಮೆಕಾಂಬಾ ... 8
ಸಾಯಣ ... 16
ಸಾಯಿಯಕ್ಕ (ಸಾವಿತ್ರೀದೇವಿ) ... 12
ಸಾವಿತ್ರೀದೇವಿ ... 12
ಸಿದ್ಧವಟದೇವ ... 14
ಸೀತೆ, ಕ್ಷಿತಿಸುತೆ ... 6, 12
ಸಿಂಗಲೆ, ಸಿಂಗಾಂಬಿಕಾ ... 16
ಸಿಂಗರಾರ್ಯ ... 20
ಸಿಂದವಾಡಿಸಾವಿರ ... 13
ಸಿಂಹಳದ್ವೀಪ ... 2
ಸುಕರಕವಿ ... 20, 21
ಸುಪಾತ್ರ ... 20
ಸುಭದ್ರಾಹರಣ ... 18
ಸುಮಂತ್ರ ... 18
ಸುವರ್ಣಾಕ್ಷಿಕ್ಷೇತ್ರ ... 4, 5
————ದೇವ ... 4, 5
ಸೂಕ್ತಿಸುಧಾರ್ಣವ ... 19
ಸೂಡಿ, ಸೂಂಡಿ ... 6, 7
ಸೂರ್ಯಗ್ರಹಣ ... 13
ಸೂರ್ಯವಂಶ ... 13n
ಸೇಗುಣ (ಸೇವುಣ) ... 7
ಸೋಗಲ್, ಸೋವಲ್, ಸೋಲು, ಸೋಲ್, ಸೋಗಲಿ ... 4
ಸೋಮ, ಸೋಮನಾಥ ... 13
ಸೋಮನಾಥೇಶ್ವರ ... 11
ಸೋಮರಾಜ ... 21
ಸೋಮಲಿಂಗೇಶ್ವರ ... 5
ಸೋಮಲೆ ... 17
ಸೋಮಾನ್ವಯ ... 13, 14
ಸೋಮಿದೇವ, ಸೋಮ ... 13, 14
ಸೋಮೇಶ್ವರ IV ... 13
————ಯತಿ ... 7, 8
ಸೌರಾಷ್ಟ್ರ ... 7
ಸ್ವರ ... 12, 14
ಸ್ವಯಂಭುದೇವ ... 5
ಹಳೆಗನ್ನಡಪ್ರಯೋಗ ... 2
ಹರಿ ... 12, 14
ಹರಿಹರರಾಯ II ... 15
ಹಂಪೆ ... 15
ಹಂಸದೇವ (ಕವಿ) ... 21
ಹಾರೀತಗೋತ್ರ ... 8
ಹುಲ್ಷ್, ಡಾಕ್ಟರ್ ... 8
ಹೆಮ್ಮಾಡಿ ... 11
ಹೊಯ್ಸಳ ... 3n

N.C

"A book that is shut is but a block"

CENTRAL ARCHAEOLOGICAL LIBRARY
GOVT. OF INDIA
Department of Archaeology
NEW DELHI

Please help us to keep the book clean and moving.